
ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

ಸಂಪುಟ : 6 । ಸಂಚಿಕೆ : 2 । ಫೆಬ್ರವರಿ - 2024 । ಪುಟಗಳು : 20 । ಬೆಲೆ : 25/-



## ಕರ್ನಾಟಕ ಸಾಂಸ್ಕೃತಿಕ ನಾಯಕರಾಗಿ ಕಾಯಕಯೋಗಿ, ಮಹಾಮಾನವತಾವಾದಿ ಜಗಜ್ಯೋತಿ ಬಸವೇಶ್ವರರು



## ಪತ್ತಿನ ಮಹಾಮಂಡಳದಲ್ಲಿ ಗಣರಾಜ್ಯ ಅಮೃತಮಹೋತ್ಸವ ಆಚರಣೆ

## ಮಂಗಳೂರಿನಲ್ಲಿ ಪತ್ತಿನ ಸಹಕಾರ ಸಂಘಗಳ ತರಬೇತಿ ಕಾರ್ಯಾಗಾರ






ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕ ರತ್ನ ಶತಾಯುಷಿ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಸ್ಮರಣಾರ್ಥ ನಿರ್ಮಿಸಿರುವ "ಸ್ಮೃತಿ ವನ"ವನ್ನು ಉದ್ಘಾಟಿಸಿ, ಶ್ರೀಗಳ 5ನೇ ಪುಣ್ಯ ಸಂಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು, ಸಿದ್ದಗಂಗಾ ಶ್ರೀಗಳೊಂದಿಗೆ ಸಚಿವರುಗಳಾದ ಡಾ. ಜಿ. ಪರಮೇಶ್ವರ, ಎಂ.ಬಿ. ಪಾಟೀಲ್, ಕೆ.ಎನ್. ರಾಜಣ್ಣ, ಈಶ್ವರ ಖಂಡ್ರೆ ಮತ್ತಿತರರು ಉಪಸ್ಥಿತರಿದ್ದರು.



ಬೆಂಗಳೂರಿನ ಎಸ್.ಕೆ.ಎಫ್ ಬೇರಿಂಗ್ಸ್ ನೌಕರರ ಪತ್ತಿನ ಸಹಕಾರ ಸಂಘದ ಬೆಳ್ಳಿ ಹಬ್ಬ ಸಂಭ್ರಮದ ಉದ್ಘಾಟನೆಯನ್ನು ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ. ಮಹೇಂದ್ರಪ್ರಸಾದ್‌ಗೌಡರವರು ಹಾಗೂ ಸಂಘದ ಸ್ಥಾಪಕರಾದ ಶ್ರೀ ಕೆ. ಜಯರಾಮಾಚಾರಿ, ಸಂಘದ ಅಧ್ಯಕ್ಷರು, ಶಾಂತರಾಜು ಸಿ., ಉಪಾಧ್ಯಕ್ಷರು, ಶ್ರೀ ಶ್ರೀಕಾಂತರಾವ್, ಶ್ರೀ ವಿ. ರವಿ ಪ್ರಧಾನ ಕಾರ್ಯದರ್ಶಿರವರುಗಳು ಜಂಟಿಯಾಗಿ ನೆರವೇರಿಸಿದರು.



ಶ್ರೀ ಗಾಯಿತ್ರಿ ಪತ್ತಿನ ಸಹಕಾರ ಸಂಘ ನಿ., ಸೂಳೆಭಾವಿ, ಬಾಗಲಕೋಟೆ ಜಿಲ್ಲೆ ಈ ಸಂಘದ ಅಧ್ಯಕ್ಷರು, ಸಹಕಾರ ಪತ್ತಿನ ಮಹಾಮಂಡಳದ ಹಾಲಿ ನಿರ್ದೇಶಕರಾದ ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿರವರು ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಶ್ರೀ ವಿ. ರಾಜುರವರಿಗೆ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪ್ರಜ್ವಲ್‌ರವರಿಗೆ ಶಿಕ್ಷಣ ನಿಧಿಯ ಚೆಕನ್ನು ನೀಡಿದರು. ಇದೇ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಶ್ರೀ ಹನುಮಂತಪ್ಪ ಒಡೊಡಗಿ ಹಾಗೂ ಮಹಾಮಂಡಳದ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಪತ್ತಿನ ಮಹಾಮಂಡಳದಲ್ಲಿ ಗಣರಾಜ್ಯ ಅಮೃತಮಹೋತ್ಸವ ಆಚರಣೆ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಆವರಣದಲ್ಲಿ 75ನೇ ಗಣರಾಜ್ಯ ಅಮೃತಮಹೋತ್ಸವವನ್ನು ಆಚರಿಸಲಾಯಿತು. ಶ್ರೀಮತಿ ಆಶಾ.ಡಿರವರ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು. ಮುಖ್ಯಕಾರ್ಯನಿರ್ವಹಣಾಧಿಕಾರಿಯವರು ಅಧ್ಯಕ್ಷರು ಹಾಗೂ ಸಿಬ್ಬಂದಿವರ್ಗದವರಿಗೆ ಸ್ವಾಗತ ಕೋರಿದರು. ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ವಿ.ರಾಜುರವರು 75ನೇ ಗಣರಾಜ್ಯ ಅಮೃತಮಹೋತ್ಸವದ ಆಚರಣೆ ಸಂಬಂಧ ರಾಷ್ಟ್ರಧ್ವಜಾರೋಹಣ ನೆರವೇರಿಸಿದರು. ನಂತರ ಅವರು ಮಾತನಾಡಿ ಮಹಾಮಂಡಳದ ಆಡಳಿತಮಂಡಳಿ ಸದಸ್ಯರುಗಳಿಗೆ ಹಾಗೂ ಸಿಬ್ಬಂದಿವರ್ಗದವರಿಗೆ ಗಣರಾಜ್ಯ ಅಮೃತಮಹೋತ್ಸವದ ಶುಭಾಶಯಗಳನ್ನು ತಿಳಿಸಿ ಇಂದು ದೇಶಾದ್ಯಂತ ಅಮೃತಮಹೋತ್ಸವದ ದಿನಾಚರಣೆಯನ್ನು ಹಬ್ಬದ ರೀತಿಯಲ್ಲಿ ಆಚರಿಸಲಾಗುತ್ತಿದೆ. ಬ್ರಿಟಿಷರ ಆಳ್ವಿಕೆಯಿಂದ ಮುಕ್ತಿ ಪಡೆದು ಭಾರತದಲ್ಲಿ ನಮ್ಮದೇ ಆದ ಸಂವಿಧಾನವನ್ನು ರಚಿಸಲಾಯಿತು. ಸಂವಿಧಾನ ಜಾರಿಗೆ ತರುವಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ರವರ ಪಾತ್ರ ಮಹತ್ವದ್ದಾಗಿತ್ತು. ಭಾರತವು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಕ್ಕೆ ಒಳಪಟ್ಟು ದೇಶದ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ಇದೇ ರೀತಿಯಲ್ಲಿ ಮುಂದುವರೆದು ದೇಶ ಅಭಿವೃದ್ಧಿ ಪಥದಲ್ಲಿ ಸಾಗಬೇಕು ಎಂದು ನುಡಿದರು. ಅದು ಭಾರತದ ಪ್ರಜೆಗಳ ಕರ್ತವ್ಯ ಮತ್ತು ಜವಾಬ್ದಾರಿ ಕೂಡ ಆಗಿರುತ್ತದೆ. ದೇಶದ ಶಾಲಾ ಕಾಲೇಜುಗಳಲ್ಲಿ. ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ರಾಷ್ಟಮಟ್ಟದಲ್ಲಿ ಗಣರಾಜ್ಯ ಅಮೃತಮಹೋತ್ಸವವನ್ನು ಸಂಭ್ರಮದಿಂದ ಆಚರಿಸುತ್ತಿದ್ದಾರೆ. ನಾವು ಎಲ್ಲರೂ ಸೇರಿ ಗಣರಾಜ್ಯೋತ್ಸವ ಆಚರಿಸಿದ್ದೇವೆ. ಅದೇ ರೀತಿ ಇನ್ನು ನಮ್ಮ ಮಹಾಮಂಡಳದಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಶ್ರದ್ಧೆಯಿಂದ, ಆಸಕ್ತಿಯಿಂದ ಆಚರಿಸುವಂತೆ ತಿಳಿಸಿದರು. ಸಂವಿಧಾನದಲ್ಲಿ ಸಹಕಾರಿ ಕ್ಷೇತ್ರಕ್ಕೆ ತಿದ್ದುಪಡಿ ತಂದಿದ್ದು ಸಹಕಾರಿ ಕ್ಷೇತ್ರಕ್ಕೆ ಕಾಯ್ದೆಯಡಿಯಲ್ಲಿ ಕೆಲಸ ಮಾಡುತ್ತಿರುವ ನಮ್ಮೆಲ್ಲ ಕರ್ತವ್ಯ ಹಾಗೂ ಜವಾಬ್ದಾರಿ ಕೂಡ ಆಗಿದೆ. ಭಾರತದ ಪ್ರಜಾಪ್ರಭುತ್ವದಡಿಯಲ್ಲಿ ಅದರ ವ್ಯವಸ್ಥೆಯನ್ನು ಅರಿತು ಪ್ರಾಮಾಣಿಕವಾಗಿ ದೇಶದ ಅಭಿವೃದ್ಧಿಗೆ ಸಹಕರಿಸೋಣ. ಭಾರತವನ್ನು ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿ ತರುವಲ್ಲಿ ಕೈಜೋಡಿಸೋಣ ಎಂದರು. ದೇಶಕ್ಕೆ ಪ್ರಾಣದಾನ ಮಾಡಿದ ಬಲಿದಾನಗಳನ್ನೂ ಸ್ಮರಿಸಿ ಅವರಿಗೆ ವಂದನೆ ಸಲ್ಲಿಸಿ, ಮುಂದಿನ ದಿನಗಳಲ್ಲಿ ಭಾರತ ದೇಶ ಪ್ರಗತಿ ಪಥದತ್ತ ಸಾಗಲಿ ಎದು ಹಾರೈಸಿದರು.

ಮುಖ್ಯಕಾರ್ಯನಿರ್ವಹಣಾಧಿಕಾರಿ ಪ್ರಜ್ವಲ್ ಕೆ.ಎನ್ ರವರು 75ನೇ ಗಣರಾಜ್ಯ ಅಮೃತಮಹೋತ್ಸವದ ಶುಭಾಶಯಗಳನ್ನು ತಿಳಿಸುತ್ತಾ 1950 ಜನವರಿ-26ರಂದು ಸಂವಿಧಾನವನ್ನು ಜಾರಿಗೆ ತರಲಾಯಿತು. ವಿಶ್ವದಲ್ಲೇ ದೊಡ್ಡ ಸಂವಿಧಾನವಾಗಿದ್ದು, ಲಿಖಿತ ರೂಪದಲ್ಲಿದೆ. ಎಲ್ಲಾ ದೇಶಗಳ ಸಂವಿಧಾನಗಳನ್ನು ಅಧ್ಯಯನ ಮಾಡಿ ನಮ್ಮ ದೇಶಕ್ಕೆ ಅಗತ್ಯವಿರುವಂತಹವುಗಳನ್ನು ಅಳವಡಿಸಿಕೊಂಡು ಜಾರಿಗೆ ತರಲಾಗಿದೆ. ಸಂವಿಧಾನದಲ್ಲಿ ಸಹಕಾರಿ ಕ್ಷೇತ್ರಕ್ಕೆ ಒಂದು ಸ್ಥಾನವಿದೆ. ಅದರಂತೆ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ನಿರ್ವಹಿಸಿ ದೇಶದ ಅಭಿವೃದ್ಧಿಗೆ ಸಹಕಾರಿಯಾಗಬೇಕು. ಪ್ರತಿಯೊಬ್ಬ ಪ್ರಜೆಯು ಸಂವಿಧಾನದಲ್ಲಿರುವ ಹಕ್ಕು ಮತ್ತು ಕರ್ತವ್ಯಗಳನ್ನು ಅಳವಡಿಸಿಕೊಳ್ಳುವಂತೆ ತಿಳಿಸಿದರು. ನಂತರ ಶ್ರೀಮತಿ ಅಶಾಲತಾ.ಪಿ ರವರು ವಂದನಾರ್ಪಣೆ ಮಾಡಿದರು.

## ಸಂಪಾದಕೀಯ



ವಿ. ರಾಜು
ಅಧ್ಯಕ್ಷರು

**ಸಹಕಾರ ಸಂಸ್ಥೆಗಳು ಸಾರ್ವಜನಿಕರ ವಿಶ್ವಾಸ–ನಂಬಿಕೆ ಹೆಚ್ಚಿಕೊಂಡು ಕಾರ್ಯನಿರ್ವಹಿಸುತ್ತಾ ಪ್ರಗತಿಯ ಪಥದಲ್ಲಿ ಸಾಗುತ್ತಿದೆ. ಆದರೂ ಕೆಲ ಸಂಸ್ಥೆಗಳು ಸಾರ್ವಜನಿಕರ ವಿಶ್ವಾಸ ಉಳಿಸಿಕೊಳ್ಳುವಲ್ಲಿ ವಿಫಲವಾಗಿವೆ. ಇದು ಸಹಕಾರ ಚಳವಳಿಯ ಬೆಳವಣಿಗೆಗೆ ಕಪ್ಪು ಚುಕ್ಕೆಯಂತಾಗಿದೆ.**

# ತರಬೇತಿ ಮತ್ತು ವೃತ್ತಿಪರತೆ

ದೇಶದಲ್ಲಿ ಸಹಕಾರ ಚಳವಳಿ ಆರಂಭಗೊಂಡು 119 ವರ್ಷಗಳು ಕಳೆದಿವೆ. ಕರ್ನಾಟಕ ರಾಷ್ಟ್ರದ ಸಹಕಾರ ಚಳವಳಿಯ ತೊಟ್ಟಿಲು ಎಂದೇ ಖ್ಯಾತಿ ಪಡೆದಿದೆ. ಶತಮಾನದ ಹಿಂದೆ ಸಹಕಾರ ಚಳವಳಿಯ ಬೆಳವಣಿಗೆ ಅಷ್ಟೇನು ಪರಿಣಾಮಕಾರಿಯಾಗಿರಲಿಲ್ಲ, ಸ್ವಾತಂತ್ರನಂತರ ಚಳವಳಿಯ ವೇಗ ಹೆಚ್ಚಾಯಿತು. ಆದರೂ ಕಳೆದ ಎರಡು – ಮೂರು ದಶಕಗಳಲ್ಲಿ ಆಗಿರುವ ಬೆಳವಣಿಗೆಗಳು ಹೆಚ್ಚು ಸಮಾಧಾನಕವಾಗಿದೆ.

ಹಿಂದೆ ಸಹಕಾರ ಸಂಸ್ಥೆಗಳು ಸೇವಾ ಸಂಸ್ಥೆಗಳಾಗಿದ್ದವು. ಕ್ರಮೇಣ ಸ್ಪರ್ಧಾತ್ಮಕ ಪರಿಸರದಲ್ಲಿ ಸೇವೆಯ ಜೊತೆಗೆ ಲಾಭಗಳಿಗೂ ಆದ್ಯತೆ ನೀಡಲಾಗುತ್ತಾ ಬರಲಾಗಿದೆ.

ಸಹಕಾರ ಸಂಸ್ಥೆಗಳು ಸಾರ್ವಜನಿಕರ ವಿಶ್ವಾಸ–ನಂಬಿಕೆ ಹೆಚ್ಚಿಕೊಂಡು ಕಾರ್ಯನಿರ್ವಹಿಸುತ್ತಾ ಪ್ರಗತಿಯ ಪಥದಲ್ಲಿ ಸಾಗುತ್ತಿದೆ. ಆದರೂ ಕೆಲ ಸಂಸ್ಥೆಗಳು ಸಾರ್ವಜನಿಕರ ವಿಶ್ವಾಸ ಉಳಿಸಿಕೊಳ್ಳುವಲ್ಲಿ ವಿಫಲವಾಗಿವೆ. ಇದು ಸಹಕಾರ ಚಳವಳಿಯ ಬೆಳವಣಿಗೆಗೆ ಕಪ್ಪು ಚುಕ್ಕೆಯಂತಾಗಿದೆ.

ಆಗಾಗ್ಗೆ ಸಹಕಾರ ಕಾಯ್ದೆ–ನಿಯಮಗಳಲ್ಲಿ ಬದಲಾವಣೆಗಳಾಗುವುದು ಸಹಜ. ಇವುಗಳನ್ನು ಅರಿತು ಕಾರ್ಯನಿರ್ವಹಿಸುವುದು ಪ್ರತಿಯೊಂದು ಸಹಕಾರ ಸಂಘದ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿಗಳ ಜವಾಬ್ದಾರಿಯೂ ಹೌದು. ಆಡಳಿತ ಮಂಡಳಿ ಸದಸ್ಯರುಗಳ ಬದ್ಧತೆಯುಳ್ಳ ಮಾರ್ಗದರ್ಶನ, ಸಿಬ್ಬಂದಿಗಳಲ್ಲಿ ದಕ್ಷತೆ – ಪ್ರಾಮಾಣಿಕತೆಗಳು ಸಂಸ್ಥೆಗಳನ್ನು ಬಲಿಷ್ಠವಾಗಿ ಬೆಳೆಯಲು ನೆರವಾಗುತ್ತಿವೆ. ಇವೆಲ್ಲವುಗಳ ಬೆಳವಣಿಗೆಗೆ ತರಬೇತಿ – ಶಿಕ್ಷಣವೂ ಪ್ರಮುಖ ಪಾತ್ರವಹಿಸುತ್ತಿದೆ.

ಇತ್ತೀಚಿನ ದಿನಗಳಲ್ಲಿ ವಿವಿಧ ಸಹಕಾರ ಮಹಾಮಂಡಳಗಳು ಪರಿಣಾಮಕಾರಿ ತರಬೇತಿ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿವೆ. ತರಬೇತಿ ಪಡೆದವರಿಂದ ವೃತ್ತಿಪರತೆ ಕಾಣಲು ಸಾಧ್ಯವಿದೆ. ಪ್ರತಿಯೊಬ್ಬ ಆಡಳಿತ ಮಂಡಳಿ ನಿರ್ದೇಶಕರು, ಅಧಿಕಾರಿ/ ಸಿಬ್ಬಂದಿಗಳು ಕಡ್ಡಾಯವಾಗಿ ಸಹಕಾರ ಶಿಕ್ಷಣ–ತರಬೇತಿಗಳಲ್ಲಿ ಭಾಗವಹಿಸಿ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚಿಂತನ ಮಂತನ ನಡೆಸಲು ಸಹಕಾರಿಯಾಗಲಿದೆ. ಸಂಘಗಳು ಪ್ರಗತಿ ಸಾಧಿಸಿದರೆ ಮುಂದಿನ ಜನಾಂಗಕ್ಕೆ ಉತ್ತಮ ದಾರಿ ತೋರಿಸಿಕೊಟ್ಟಂತಾಗುತ್ತದೆ. ತಪ್ಪದೇ ಎಲ್ಲರೂ ಶಿಕ್ಷಣ ತರಬೇತಿಯ ಪ್ರಯೋಜನ ಪಡೆದು ವೃತ್ತಿಪರರಾಗಿ ಮುನ್ನಡೆಯಲಿ ಎಂದು ಆಶಿಸೋಣ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**
ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀ ವಿ. ರಾಜು**

ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು :
**ಪ್ರಜ್ವಲ್ ಕೆ.ಎನ್.**
ಮುಖ್ಯಕಾರ್ಯನಿರ್ವಹಣಾಧಿಕಾರಿ

# ಮಂಗಳೂರು ಶಿಕ್ಷಣ ತರಬೇತಿ ಕಾರ್ಯಕ್ರಮ



**ಮಂಗಳೂರು :** ಪತ್ತಿನ ಮಹಾಮಂಡಳದ ವತಿಯಿಂದ ದಿನಾಂಕ : 27.01.2024ರಂದು ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘ ನಿ., ಮಂಗಳೂರು ಇವರ ಸಹಯೋಗದೊಂದಿಗೆ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಚಿಕ್ಕಮಗಳೂರು, ಉಡುಪಿ, ಕೊಡಗು ದಕ್ಷಿಣಕನ್ನಡ ಜಿಲ್ಲೆಗಳ ವ್ಯಾಪ್ತಿಗೊಳಪಡುವ ಪತ್ತಿನ ಸಹಕಾರ ಸಂಘಗಳ ಆಡಳಿತಮಂಡಳಿ ನಿರ್ದೇಶಕರುಗಳಿಗೆ, ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳಿಗೆ, ಸಿಬ್ಬಂದಿಗಳಿಗೆ ಒಂದು ದಿನದ ಶೈಕ್ಷಣಿಕ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಶ್ರೀವಿ.ರಾಜುರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

ಕರ್ನಾಟಕ ವಿಧಾನ ಪರಿಷತ್ತಿನ ಶಾಸಕರಾದ ಶ್ರೀ ಕೆ.ಹರೀಶ್ ಕುಮಾರ್ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದರು. ಪತ್ತಿನ ಮಹಾಮಂಡಳದ ನಿರ್ದೇಶಕರಾದ ಶ್ರೀ ಚಿತ್ತರಂಜನ್ ಬೋಳಾರ್ ರವರು ಹಾಗೂ ಶ್ರೀ ಸಲೀಂ ಬಿ ಕೆ, ಸಹಕಾರ ಸಂಘಗಳ ಉಪನಿಬಂಧಕರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಪತ್ತಿನ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಕೆ.ಎನ್.ಪ್ರಜ್ವಲ್‌ರವರು ಹಾಜರಿದ್ದರು.

**ಸುಭಾಷಿತ :** "ಶಾಸ್ತ್ರದಲ್ಲಿ ದೋಷವಿದ್ದರೆ ಹೃದಯದಲ್ಲಿ ತಿದ್ದಬಹುದು, ಹೃದಯದಲ್ಲಿ ದೋಷವಿದ್ದರೆ ಶಾಸ್ತ್ರ ಏನು ಮಾಡುವುದು?"
– ದತ್ತಾತ್ರೇಯ ರಾಮಚಂದ್ರ ಬೇಂದ್ರೆ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

### 75ನೇ ಗಣರಾಜ್ಯೋತ್ಸವ : ಕರ್ನಾಟಕದ ಪ್ರಗತಿ ಶ್ಲಾಘನೀಯ

# 5 ಗ್ಯಾರಂಟಿ ಯೋಜನೆಗಳ ಮೂಲಕ ಜನತೆಗೆ ನೆರವು ನೀಡಿದ ಸರ್ಕಾರ : ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್

**ಬೆಂಗಳೂರು :** ಭಾರತ ಸಂವಿಧಾನ ಜಾರಿಗೆ ಬಂದು 75 ವರ್ಷಗಳು ಸಾಗಿದೆ. ಈ ದಿಸೆಯಲ್ಲಿ ದೇಶದ ಸಮಗ್ರತೆ, ಏಕತೆಯನ್ನು ಕಾಪಾಡುವುದರ ಜೊತೆಗೆ ರಾಷ್ಟ್ರದ ಅಭಿವೃದ್ಧಿಗೆ ಶ್ರಮಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಸಂವಿಧಾನ ಈ ಆಶಯಗಳನ್ನು ಸಾಕಾರಗೊಳಿಸಲು ನಮ್ಮ ಸರ್ಕಾರ ಶ್ರಮಿಸುತ್ತಿದ್ದು, ನಾಗರೀಕರಿಗೆ ಉತ್ತಮ ಜೀವನ ನಡೆಸಲು ಸರ್ಕಾರವು ಈಗಾಗಲೇ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಕರ್ನಾಟಕದಲ್ಲಿ ಅಭೂತಪೂರ್ವ ಬೆಳವಣಿಗೆಗೆ ಅವಕಾಶ ಕಲ್ಪಿಸಿದೆ ಎಂದು ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ತಿಳಿಸಿದ್ದಾರೆ.

ಅವರು ಬೆಂಗಳೂರಿನ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಗಣರಾಜ್ಯೋತ್ಸವದ ಪ್ರಯುಕ್ತ ಧ್ವಜಾರೋಹಣವನ್ನು ನೆರವೇರಿಸಿ ಜನತೆಯನ್ನುದ್ದೇಶಿಸಿ ಮಾತನಾಡಿದರು.

ಮಹತ್ವಾಕಾಂಕ್ಷೆ ಯೋಜನೆಯಾದ ಶಕ್ತಿ ಯೋಜನೆಯ ಅಡಿಯಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣವನ್ನು ಜಾರಿಗೊಳಿಸಿ, ಮಹಿಳಾ ಸಬಲೀಕರಣದತ್ತ ಹೊಸ ಹೆಜ್ಜೆ ಇಟ್ಟಿದೆ. ಅನ್ನಭಾಗ್ಯ ಯೋಜನೆಯಡಿ ಪ್ರತಿ ಫಲಾನುಭವಿಗಳಿಗೂ ಸಹ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ವಯ ಆಹಾರ ಭದ್ರತೆಯನ್ನು ಒದಗಿಸಿಕೊಡಲಾಗಿದೆ. ಗೃಹ ಜ್ಯೋತಿ ಯೋಜನೆಯ ಮೂಲಕ ಪ್ರತಿ ಮನೆಗೂ 200 ಯೂನಿಟ್‌ಗಳ ಗರಿಷ್ಠ ಬಳಕೆಯ ಮಿತಿಗೆ ಉಚಿತ ವಿದ್ಯುತ್ ಒದಗಿಸಲಾಗಿದೆ ಎಂದು ತಿಳಿಸಿದರು. ಗೃಹಲಕ್ಷ್ಮಿ ಯೋಜನೆಯಡಿ 17500 ಕೋಟಿ ರೂ. ಅನುದಾನವನ್ನು ನಿಗದಿಪಡಿಸಲಾಗಿದೆ. ಯುವನಿಧಿ ಯೋಜನೆಯ ಮೂಲಕ 2022–23ನೇ ಸಾಲಿನಲ್ಲಿ ಉತ್ತೀರ್ಣರಾದ ಪದವೀಧರರಿಗೆ 2 ವರ್ಷಗಳ ಅವಧಿಗೆ ಮಾಸಿಕ ರೂ. 3000 ಮತ್ತು ಡಿಪ್ಲೋಮಾ ಪಡೆದವರಿಗೆ ರೂ. 1500 ನಿರುದ್ಯೋಗ ಭತ್ಯೆಯನ್ನು ನೀಡಲಾಗುತ್ತಿದೆ. ರೈತರ ಸಂಕಷ್ಟವನ್ನು ನಿವಾರಿಸಲು ಬರಗಾಲ ಘೋಷಿತ ತಾಲ್ಲೂಕುಗಳಲ್ಲಿ ಪ್ರತಿ ರೈತನಿಗೆ ರೂ. 2000 ವರೆಗೆ ಇನ್‌ಫುಟ್ ಸಬ್ಸಿಡಿಯನ್ನು ಮಧ್ಯಂತರ ಪರಿಹಾರವಾಗಿ ನೀಡಲಾಗುತ್ತಿದ್ದು, ಸುಮಾರು 30 ಲಕ್ಷ ರೈತರಿಗೆ ರೂ. 580 ಕೋಟಿ ಬಿಡುಗಡೆ ಮಾಡುವ ಪ್ರಕ್ರಿಯೆ ಚಾಲನೆಯಲ್ಲಿದೆ. ರೈತಸಿರಿ ಯೋಜನೆಯಡಿ ಬೆಳೆ ಸಮೀಕ್ಷೆ ಆಧರಿಸಿ ಸಿರಿಧಾನ್ಯ ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ ರೂ. 10000 ದಂತೆ, ಗರಿಷ್ಠ 2 ಹೆಕ್ಟೇರ್‌ವರೆಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. ರಾಜ್ಯದಾದ್ಯಂತ 168 ಡಯಾಲಿಸಿಸ್ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು, ಒಟ್ಟು 3685 ರೋಗಿಗಳಿಗೆ 2,82,439 ಸೈಕಲ್‌ಗಳ ಡಯಾಲಿಸಿಸ್ ಸೇವೆಯನ್ನು ಉಚಿತವಾಗಿ ನೀಡಲಾಗಿದೆ.

ರಾಜ್ಯದ ಎಲ್ಲಾ ಶಾಲೆಗಳಲ್ಲಿ ಭಾರತದ ಸಂವಿಧಾನ ಪೀಠಿಕೆ ವಿನ್ಯಾಸದ ಫೋಟೋವನ್ನು ತೂಗು ಹಾಕಲು ಮತ್ತು ಪ್ರಾರ್ಥನೆಯ ಸಮಯದಲ್ಲಿ ಸಂವಿಧಾನದ ಪೀಠಿಕೆಯನ್ನು ಓದಲು ಕ್ರಮವಹಿಸಲಾಗಿದೆ ಎಂದರು.



ಸೇವಾಸಿಂಧು ಯೋಜನೆಯ ಮೂಲಕ 44 ಯೋಜನೆಗಳನ್ನು ಒಂದೇ ವೇದಿಕೆಯಲ್ಲಿ ಸಂಯೋಜಿಸಿ ಒಟ್ಟು ರೂ. 10035 ಕೋಟಿಗಳ ಆರ್ಥಿಕ ನೆರವನ್ನು 2.54 ಕೋಟಿ ಜನರಿಗೆ ತಲುಪಿಸಲಾಗಿದೆ.

ಸಂವಿಧಾನ ಅನುಷ್ಠಾನಗೊಂಡ 75ನೇ ವರ್ಷದಲ್ಲಿ ಕರ್ನಾಟಕವು ಎಲ್ಲಾ ಕಾರ್ಯಕ್ರಮಗಳ ಮೂಲಕ ಅಭೂತಪೂರ್ವ ಪ್ರಗತಿಯನ್ನು ಸಾಧಿಸಿದ್ದು, ಈ ಎಲ್ಲಾ ಬೆಳವಣಿಗೆಗೆ ಸಂವಿಧಾನ ಅಳವಡಿಸಿಕೊಂಡ ಕಾರಣ ಸಾಧ್ಯವಾಗಿದೆ. ಇಂತಹ ಸಂವಿಧಾನವನ್ನು ಜಾರಿಗೆ ತಂದ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಅವರ ತಂಡದ ಸದಸ್ಯರ ದೂರದೃಷ್ಟಿಗೆ ನಾವು ಸದಾಕಾಲ ಅಬಾರಿಯಾಗಿರುತ್ತೇವೆ ಎಂದು ಅವರು ತಿಳಿಸಿದರು.

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಯೋಜನೆಗಳು ಮತ್ತು ಸಾಧನೆಗಳ ಬಗ್ಗೆ ರಾಜ್ಯಪಾಲರು ಮುಕ್ತಕಂಠದಿಂದ ಶ್ಲಾಘಿಸಿದರು. ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೇರಿದಂತೆ ಜನಪ್ರತಿನಿಧಿಗಳು – ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ನಂತರ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಕಾರ್ಯಕ್ರಮದ ಆರಂಭದಲ್ಲಿ ರಾಜ್ಯಪಾಲರು ಧ್ವಜವಂದನೆ ಸ್ವೀಕರಿಸಿದರು.

## ಲಾಲ್‌ಬಾಗ್‌ನಲ್ಲಿ 215ನೇ ಫಲಪುಷ್ಪ ಪ್ರದರ್ಶನ ಉದ್ಘಾಟನೆ
## ಬಸವಣ್ಣನವರು ಸಾಂಸ್ಕೃತಿಕ ನಾಯಕ - ಮುಖ್ಯಮಂತ್ರಿ ಸಿದ್ದರಾಮಯ್ಯ



**ಬೆಂಗಳೂರು :** ಗಣರಾಜ್ಯೋತ್ಸವದ ನಿಮಿತ್ತ ಲಾಲ್‌ಬಾಗ್‌ನಲ್ಲಿ ಆಯೋಜಿಸಲಾಗಿದ್ದ 215ನೇ ಫಲಪುಷ್ಪ ಪ್ರದರ್ಶನದ ಬಸವಣ್ಣನ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದ್ದಾರೆ. 215ನೇ ಫಲಪುಷ್ಪ ಪ್ರದರ್ಶನದಲ್ಲಿ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣ ಪ್ರತಿರೂಪ ಅರಳಿದ್ದು, ಲಾಲ್‌ಬಾಗ್‌ನ ಗಾಜಿನಮನೆಯಲ್ಲಿ ಸೇವಂತಿಗೆ, ಗುಲಾಬಿ ಹೂವುಗಳಿಂದ ಅನುಭವ ಮಂಟಪ ನಿರ್ಮಾಣ ಮಾಡಲಾಗಿತ್ತು. 8 ಬಗೆಯ 32 ಲಕ್ಷ ಹೂವುಗಳನ್ನು ಬಳಕೆ ಮಾಡಲಾಗಿತ್ತು.

ಫಲಪುಷ್ಪ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ಸಾಕಷ್ಟು ಜನ ಸ್ವಾಮೀಜಿಗಳು ನನ್ನನ್ನು ಭೇಟಿ ಮಾಡಿ. ಸಾಂಸ್ಕೃತಿಕ ನಾಯಕ ಅಂತ ಬಸವಣ್ಣನವರನ್ನ ಕರೆಯಬೇಕು ಎಂದು ಒತ್ತಾಯ ಮಾಡಿದರು. ಹೀಗಾಗಿ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಿದ್ದೇವೆ. ಇನ್ಮುಂದೆ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಕರೆಯಲಾಗುತ್ತದೆ ಎಂದು ತಿಳಿಸಿದರು. ಶಿಕಾರಿಪುರದಲ್ಲಿರುವ 46 ಎಕರೆ ಜೈಲಿನ ಜಾಗಕ್ಕೆ ಅಲ್ಲಮಪ್ರಭು ಎಂದು ನಾಮಕರಣ ಮಾಡಿದ್ದೇವೆ ಎಂದು ತಿಳಿಸಿದ್ದಾರೆ.

ಲಾಲ್‌ಬಾಗ್‌ನಲ್ಲಿ ಎಂದಿನಂತೆ ಗಣರಾಜ್ಯೋತ್ಸವದ ಪ್ರಯುಕ್ತ ಫಲಪುಷ್ಪ ಪ್ರದರ್ಶನವನ್ನು ಆಯೋಜನೆ ಮಾಡಲಾಗಿತ್ತು. 12ನೇ ಶತಮಾನದಲ್ಲಿ ಸಮಾನತೆಯನ್ನು ನಿರ್ಮಿಸಿ ಜಾತಿ ಪದ್ಧತಿ ಹೋಗಲಾಡಿಸುವ ನಿಟ್ಟಿನಲ್ಲಿ ಬಸವಣ್ಣನವರು ಹೋರಾಡಿದ್ದರು.

ಬಸವಣ್ಣನವರ ಸಂದೇಶವನ್ನು ಜನರಿಗೆ ತಲುಪಿಸುವ ಕೆಲಸವನ್ನ ತೋಟಗಾರಿಕೆ ಇಲಾಖೆ ಮಾಡಿದೆ. ಫಲಪುಷ್ಪ ಪ್ರದರ್ಶನದಲ್ಲಿ ಹಲವು ಬೆಳವಣಿಗೆಯ ಪರಿಚಯಿಸುವ ಕೆಲಸ ತೋಟಗಾರಿಕೆ ಇಲಾಖೆ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

## ಮಾರಿಷಸ್ ದೇಶದ ಸಹಕಾರ ಸಂಘಗಳ ಅಧ್ಯಯನಕ್ಕೆ ಡಾ ಸಂಜಯ ಹೊಸಮಠ



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಇದರ ನಿರ್ದೇಶಕರಾದ ಡಾ ಸಂಜಯ ಪಂಚಾಕ್ಷರಿ ಹೊಸಮಠ ಇವರು ಮಾರಿಷಸ್ ದೇಶದ ಸಹಕಾರ ಮಹಾಮಂಡಳದ ಆಮಂತ್ರಣದ ಮೇರೆಗೆ ಶ್ರೀ ಕಾಕಾ ಕೊಯಿತೆ ಅಧ್ಯಕ್ಷರು ಮಹಾರಾಷ್ಟ್ರ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ಇವರ ನೇತೃತ್ವದಲ್ಲಿ ಐದು ದಿನದ ಸಹಕಾರ ಶೈಕ್ಷಣಿಕ ಪ್ರವಾಸವನ್ನು ದ್ವೀಪಗಳ ನಾಡಾದ ಮಾರಿಷಸ್ ದೇಶಕ್ಕೆ ಇದೇ ಜನವರಿ 28 ಶನಿವಾರ ರಂದು ಮುಂಬೈ ಮುಖಾಂತರ ಪ್ರಯಾಣ ಬೆಳೆಸಿದ್ದಾರೆ.

ಮಾರಿಷಸ್ ಸಹಕಾರ ಮಹಾಮಂಡಳ ಇದೊಂದು ಸ್ವಾಯುತ ಸಂಸ್ಥೆಯಾಗಿದ್ದು, ಇದು ದೇಶದ ಸಹಕಾರ ಪತ್ತಿನ ಸಂಘಗಳನ್ನು ಪ್ರತಿನಿಧಿಸುತ್ತದೆ, ಜೇಮ್ಸ್ ವಿನ್ಲೋ ಈ ಮಹಾಮಂಡಳದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಲ್ಲಿ ಸಹಕಾರ ಆಂದೋಲನವು ಪ್ರತಿ ಊರಿಗೂ ಹರಡಿದ್ದು ಸಹಕಾರ ಕ್ಷೇತ್ರವನ್ನು ಪ್ರವಾಸೋದ್ಯಮ ಮುಖಾಂತರ ಬಲಪಡಿಸಿದ್ದು ವಿಶೇಷ ಎನಿಸುತ್ತದೆ.

# ಕನ್ನಡಿಗರ ಸಾಂಸ್ಕೃತಿಕ ನಾಯಕ ಬಸವಣ್ಣ

ಯಾವುದೇ ದೇಶ ಅಥವಾ ರಾಜ್ಯಕ್ಕೆ ಅದರದೆ ಆದ ಸಂಸ್ಕೃತಿ ಮತ್ತು ಇತಿಹಾಸ ಇರುತ್ತದೆ. ಅದೇರೀತಿ ಇಡೀ ಸಮುದಾಯವನ್ನು ಸರಿದಾರಿಗೆ ಕರೆದೊಯ್ಯುವ ಸಾಂಸ್ಕೃತಿಕ ನಾಯಕನೂ ಇರುತ್ತಾನೆ ಆ ನಾಯಕ ಹಾಕಿ ಕೊಟ್ಟ ಸಂಸ್ಕತಿಯ ಪಥದಲ್ಲಿ ರಾಜ್ಯ ಮತ್ತು ದೇಶದಲ್ಲಿ ಹಲವಾರು ಅಭಿವೃದ್ಧಿ ಮತ್ತು ಸಾಮಾಜಿಕ, ಸಾಂಸ್ಕೃತಿಕ ಬೆಳವಣಿಗೆಗಳು ನಡೆಯುತ್ತವೆ. ಅದೇ ಪ್ರಕಾರ ಜಾತಿ ಆಧಾರದಲ್ಲಿ ಒಡೆದು ಹೋಗಿ, ಮೇಲು ಕೀಳು, ಸ್ಪೃಶ್ಯ, ಅಸ್ಪೃಶ್ಯ ಎಂದು ಕಚ್ಚಾಡಿಕೊಳ್ಳುತ್ತ, ಸಹಜೀವಿ ಮನುಷ್ಯರನ್ನು ಪ್ರಾಣಿಗಳಿಗಿಂತ ಕಡೆಯಾಗಿ ನಡೆಸಿಕೊಳ್ಳುತ್ತಿದ್ದ ಕಾಲ ಘಟ್ಟದಲ್ಲಿ ಬಸವಣ್ಣನವರು ಆರಂಭಿಸಿದ ಸಮಸಮಾಜದ ಕ್ರಾಂತಿ ಇಡೀ ಜಗತ್ತಿಗೆ ಹೊಸ ಸಂದೇಶ ನೀಡಿತು.

12 ಶತಮಾನದಲ್ಲಿ ಬಸವಣ್ಣನವರು ಆರಂಭಿಸಿದ ಬಸವ ಧರ್ಮದಲ್ಲಿ ಜಾತಿ ಮತ, ಪಂಥ ಮರೆತು ಎಲ್ಲಾ ಸಮುದಾಯವದು ಸೇರಿ ಘನತೆ ಮತ್ತು ಸಮಾನತೆಯ ಜೀವನ ಸಾಗಿಸಲು ಬಸವಪಥ ನೆರವಾಯಿತು.

**"ಇವನಾರವ, ಇವನಾರವ, ಇವನಾರವ?" ನೆಂದೆನಿಸದಿರಯ್ಯಾ.**
**"ಇವ ನಮ್ಮವ, ಇವ ನಮ್ಮವ, ಇವ ನಮ್ಮವ" ನೆಂದೆನಿಸಯ್ಯಾ.**
**ಕೂಡಲಸಂಗಮದೇವಾ, ನಿಮ್ಮ ಮನೆಯ ಮಗನೆನಿಸಯ್ಯಾ.**

ಎಂದು ಉದಾತ ವಿಶ್ವಮಾನವ ಸಂದೇಶ ಸಾರಿದ ಕ್ರಾಂತಿಯೋಗಿ ಬಸವಣ್ಣ ಅವರು ಮನುಷ್ಯರೆಲ್ಲ ಒಂದೇ ತಾಯಿಯ ಮಕ್ಕಳು ಎಲ್ಲರೂ ಸಹೋದರರು ಇದರಲ್ಲಿ ಮೇಲು, ಕೀಲು, ಉಚ್ಛ, ನೀಚ ಎಂಬುದಿಲ್ಲ ಎಂಬ ದಿಟ್ಟ ಸಂದೇಶ ಸಮಾಜಕ್ಕೆ ನೀಡುವ ಮೂಲಕ ಸೌಹಾರ್ದತೆಯಿಂದ ಕೂಡಿದ ಜಾತ್ಯಾತೀತ ಸಮಾಜ ನಿರ್ಮಾಣಕ್ಕೆ ಕಾರಣರಾದರು. ಜೊತೆಗೆ ಬಸವಣ್ಣನವರ ಕಾಲಘಟ್ಟದಲ್ಲಿ ಆರಂಭವಾದ ಅನುಭವ ಮಂಟಪದ ಪರಿಕಲ್ಪನೆ ಇಡಿ ಜಗತ್ತಿಗೆ ಪ್ರಜಾಪ್ರಭುತ್ವ ಭದ್ರ ಬುನಾದಿ ಹಾಕಲು ಪ್ರೇರಣೆಯಾಯಿತು. ಬಸವಣ್ಣನವರು ಆರಂಭಿಸಿದ ಸಮ ಸಮಾಜದ ಚಳವಳಿಯ ಬೆಳಕು ಇಡಿ ಕರ್ನಾಟಕ ರಾಜ್ಯಕ್ಕೆ ಪಸರಿಸಿ ಪಕ್ಕದ ಮಹಾರಾಷ್ಟ್ರಕ್ಕೂ ಅದರ ಪ್ರಭಾವ ಬೀರುತ್ತದೆ. ಮಹಾರಾಷ್ಟ ರಾಜ್ಯದಲ್ಲೂ ಬಸವ ಅನುಯಾಯಿಗಳಿದ್ದಾರೆ.

ಈ ಹಿನ್ನಲೆಯಲ್ಲಿ ಹನ್ನೆರಡನೇ ಶತಮಾನದಲ್ಲಿ ಕಾಯಕ ಜೀವಿಗಳ ಚಳವಳಿಯ ಮೂಲಕ ಸಾಮಾಜಿಕ ಕ್ರಾಂತಿಯನ್ನೇ ನಡೆಸಿ, ವಚನಗಳ ಮೂಲಕ ಜಾಗೃತಿ ಮೂಡಿಸಿದ ಜಗಜ್ಯೋತಿ ಬಸವೇಶ್ವರರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ರಾಜ್ಯ ಸರ್ಕಾರ ಘೋಷಿಸಿದೆ. 'ಬಸವ ಪಥ'ಕ್ಕೆ ಅಗ್ರಸ್ಥಾನ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ನೇತೃತ್ವದ ಸರ್ಕಾರ ತೀರ್ಮಾನಿಸಿದೆ.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಹೇಳುವ ಪ್ರಕಾರ 'ಬಸವಣ್ಣ ಅವರ ನೇತೃತ್ವದಲ್ಲಿ ಜಾತಿ ಭೇದ ಮತ್ತು ಲಿಂಗತಾರತಮ್ಯವಿಲ್ಲದ ಸಮಾಜವನ್ನು ರೂಪಿಸುವ ಕೆಲಸ ನಡೆಯಿತು. ಭಾರತದ ಸಂವಿಧಾನವೂ ಇದನ್ನೇ ಎತ್ತಿ ಹಿಡಿದಿದೆ. ಅಲ್ಲದೇ, ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ತಾತ್ವಿಕ ಮೌಲ್ಯಗಳನ್ನೂ ಬಸವಣ್ಣ ಪ್ರತಿಪಾದಿಸಿದ್ದರು. ಅವರು ವಿಶ್ವ ಶ್ರೇಷ್ಠ ಮೌಲ್ಯಗಳನ್ನು ಪ್ರತಿಪಾದಿಸಿದ್ದ ಮಹಾನ್ ವ್ಯಕ್ತಿ ಆಗಿರುವುದರಿಂದ ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಲು ತೀರ್ಮಾನಿಸಲಾಯಿತು. ಇದಕ್ಕಾಗಿ ನಾಡಿನ ಪ್ರಗತಿಪರರು, ಚಿಂತಕರು ಮತ್ತು ಮಠಾಧೀಶರು ಒತ್ತಡ ಹಾಕಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದರು. ಭಾರತ ದೇಶದ ಸಂವಿಧಾನದ ಆಶಯಗಳಿಗೆ ಅನುರೂಪವಾದ ಬಸವಣ್ಣ ಅವರ ಚಿಂತನೆಗಳು ಸಾಂಸ್ಕೃತಿಕ ನಾಯಕತ್ವಕ್ಕೆ ಸಮರ್ಥನೀಯ ನೆಲೆ ಒದಗಿಸಿವೆ' 'ಈ ಘೋಷಣೆಯ ಬಳಿಕ ಬಸವಣ್ಣ ಅವರ ತತ್ವ ಆದರ್ಶಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಸಾರ ಮಾಡಲಾಗುವುದು. ಜಾತೀಯತೆ ತಾಂಡವವಾಡುತ್ತಿರುವ ಕಲುಷಿತ ವಾತಾವರಣದಲ್ಲಿ ಬಸವಣ್ಣ ಅವರ ತತ್ವಗಳು ಪ್ರೇರಣೆ ಆಗುವಂತಹ ವಾತಾವರಣ ನಿರ್ಮಿಸುವುದೇ ನಮ್ಮ ಉದ್ದೇಶ. ಅಲ್ಲದೇ, ರೂ. 600 ಕೋಟಿ ವೆಚ್ಚದಲ್ಲಿ ಅನುಭವ ಮಂಟಪ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಅದನ್ನು 2025ಕ್ಕೆ ಪೂರ್ಣಗೊಳಿಸಲಾಗುವುದು' ಎಂದು ಸಚಿವ ಈಶ್ವರ ಖಂಡ್ರೆ ಹೇಳುತ್ತಾರೆ.



ಬಸವಣ್ಣ ಅವರನ್ನು ಕೇವಲ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದರೆ ಸಾಲದು ಅವರ ಅವರು ಪ್ರತಿಪಾದಿಸಿದ ತತ್ವ ಸಿದ್ದಾಂತ, ಸಮಸಮಾಜ ಪರಿಕಲ್ಪನೆ ಜಾತ್ಯಾತೀತ ತತ್ವಗಳನ್ನು ಅನುಷ್ಠಾನಗೊಳಿಸಿ ಕರ್ನಾಟಕದಲ್ಲಿ ಎಲ್ಲಾ ಜಾತಿ ಧರ್ಮ ಹಾಗೂ ಭಾಷಿಕರು ಸೌಹಾರ್ದಯುತವಾಗಿ ಬಾಳುವಂತಹವಾತಾವರಣ ಸೃಷ್ಟಿ ಯಾಗುವಂತೆ ಮಾಡುವುದು ಸರ್ಕಾರದ ಹಾಗೂ ರಾಜ್ಯದ ಜನತೆಯ ಕರ್ತವ್ಯವಾಗಿದೆ.

▸▸ **ಮಂಜುನಾಥ್‌ನಾಯ್ಕ್,** ಹಿರಿಯ ಪತ್ರಕರ್ತರು, ಬೆಂಗಳೂರು.

# ನೀಲಕಂಠೇಶ್ವರಸ್ವಾಮಿ ಪತ್ತಿನ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟನೆ, ಆರ್ಥಿಕ ಶಿಸ್ತಿನಿಂದ ಸಹಕಾರ ಸಂಸ್ಥೆಗಳ ಬೆಳವಣಿಗೆ ಸಾಧ್ಯ : ಕೆ.ಎನ್. ರಾಜಣ್ಣ



**ತುಮಕೂರು :** ಪತ್ತಿನ ಸಹಕಾರ ಸಂಘಗಳು ಆರ್ಥಿಕ ಶಿಸ್ತಿನಿಂದ ಕಾರ್ಯನಿರ್ವಹಿಸಿ, ಆರೋಗ್ಯಕರವಾಗಿ ಆರ್ಥಿಕ ಸದೃಢತೆ ಹೆಚ್ಚಿಸಿಕೊಂಡು ಲಾಭಾಂಶದಲ್ಲಿ ಸಮುದಾಯದ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸಹಾಯ ಮಾಡುವ ಮೂಲಕ ಸಮಾಜಕ್ಕೂ ನೆರವಾಗಬೇಕು ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ನಗರದ ಹೊರಪೇಟೆಯ ಶ್ರೀ ನೀಲಕಂಠೇಶ್ವರ ಸ್ವಾಮಿ ಪತ್ತಿನ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಸಂಸ್ಥೆಗಳು ನೂರಕ್ಕೆ ನೂರರಷ್ಟು ಸಾಲ ವಸೂಲಾತಿ ಮಾಡದಿದ್ದರೆ ಬೆಳವಣಿಗೆ ಕಷ್ಟವಾಗುತ್ತದೆ. ಈ ಬಗ್ಗೆ ಸಂಸ್ಥೆ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ಕಾಳಜಿಯಿಂದ ಕೆಲಸ ಮಾಡಬೇಕು, ಸಹಕಾರ ನಿಯಮಾವಳಿಗಳನ್ನು ಪಾಲಿಸಿಕೊಂಡು ಬ್ಯಾಂಕಿಂಗ್ ಕ್ಷೇತ್ರದ ಬದಲಾವಣೆಯ ನೀತಿಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಸಹಕಾರ ಸಂಸ್ಥೆಗಳನ್ನು ಪ್ರಾರಂಭ ಮಾಡುವುದು ಒಂದು ರೀತಿಯ ಕಷ್ಟವಾದರೆ ನಂತರ ಬೆಳೆಸಿಕೊಂಡು ಹೋಗುವುದು ದೊಡ್ಡ ಸವಾಲು. ಬದ್ಧತೆ, ಕಾಳಜಿ, ಆರ್ಥಿಕ ಶಿಸ್ತು ಅಳವಡಿಸಿಕೊಂಡರೆ ಸಹಕಾರಿ ಸಂಸ್ಥೆಗಳ ಬೆಳವಣಿಗೆ ಸಾಧ್ಯ. ಸಕಾಲದಲ್ಲಿ ಸಾಲ ವಸೂಲಾತಿಯೊಂದಿಗೆ ಸಂಸ್ಥೆಯ ಸ್ವಂತನಿಧಿ ಹೆಚ್ಚಿಸಿಕೊಳ್ಳಬೇಕು. ಗಳಿಸುವ ಆದಾಯದಲ್ಲಿ ಸಮುದಾಯದ ಬಡಮಕ್ಕಳಿಗೆ ನೆರವಾದರೆ ಸಮಾಜಕ್ಕೆ ನೆರವು ಹಾಗೂ ಒಂದು ಕುಟುಂಬದ ಅಭಿವೃದ್ಧಿಗೆ ಸಹಾಯ ಮಾಡಿದ ಕೀರ್ತಿ ಸಂಸ್ಥೆಗೆ ಬರುತ್ತದೆ ಎಂದರು.

ಶ್ರೀ ನೀಲಕಂಠೇಶ್ವರ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಟಿ.ಹೆಚ್. ಶಿವಾನಂದ್ ಮಾತನಾಡಿ, ಸದಸ್ಯರ ಆರ್ಥಿಕ ಅಗತ್ಯಗಳನ್ನು ಪೂರೈಸಿ ಸ್ವಾವಲಂಬಿ ಜೀವನ ನಡೆಸಲು ನೆರವಾಗುವ ಉದ್ದೇಶದಿಂದ ಈ ಸಂಘವನ್ನು ಪ್ರಾರಂಭಿಸಲಾಗಿದೆ. ಸಂಘವು ಉತ್ತಮ ಸೇವೆ ನೀಡುತ್ತಿದೆ ಎಂದರು. ಪ್ರಾಚೀನ ಕಾವ್ಯಗಳ ಪ್ರವಚನಾಕಾರ ಮುರಳಿಕೃಷ್ಣಪ್ಪ ಸಂಘದ ಉಪಾಧ್ಯಕ್ಷ ಎಸ್.ಎನ್.ಎಸ್. ಬಸವರಾಜು, ನಿರ್ದೇಶಕರಾದ ಬಿ.ಎನ್ ಜಯಚಂದ್ರ, ಎಸ್.ಎನ್. ಸೋಮ ಶೇಖರ್, ಬಿ.ಎಲ್. ಗೋವಿಂದಶೆಟ್ಟಿ, ಟಿ.ಆರ್. ದಿನೇಶ್ ಕುಮಾರ್, ಎಸ್.ಎನ್. ಕೃಷ್ಣ ಮೂರ್ತಿ, ಟಿ.ಪಿ. ಜಗದೀಶ್, ಜಿ.ಆರ್. ಮುಕ್ತಾಂಬ, ಯಶೋದ, ಎಸ್. ಕಮಲ ಇತರರಿದ್ದರು.

# ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ಸೇವಾ ಮನೋಭಾವನೆ ಅಗತ್ಯ : ಚಿತ್ತರಂಜನ್ ಬೋಳಾರ್




**ಮಂಗಳೂರು :** ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಮಡಂತ್ಯಾರು ಶಾಖೆಯ ಪ್ರಥಮ ವಾರ್ಷಿಕೋತ್ಸವದ ಪ್ರಯುಕ್ತ ಗ್ರಾಹಕರ ಸಭೆಯು ಸಂಘದ ಅಧ್ಯಕ್ಷರಾದ "ಚಿತ್ತರಂಜನ್ ಬೋಳಾರ್ ರವರ ಅಧ್ಯಕ್ಷತೆಯಲ್ಲಿ ಮಡಂತ್ಯಾರು ಶಾಖೆಯಲ್ಲಿ ಜರಗಿತು. ಈ ಕಾರ್ಯಕ್ರಮವನ್ನು ಸಂಘದ ಸದಸ್ಯರಾದ ಸದಾನಂದ ಪೂಜಾರಿ, ವಿಶ್ವನಾಥ ಪೂಜಾರಿ, ಶ್ರೀಧರ್‌ಭಟ್, ತಿಮ್ಮಪ್ಪ ಗೌಡರವರುಗಳು ಉದ್ಘಾಟಿಸಿದರು.

ಸಂಘದ ಸದಸ್ಯರಾದ ಸದಾನಂದ ಪೂಜಾರಿ ಯವರು ಮಾತನಾಡಿ, ಸಂಘವು ಗ್ರಾಹಕರ ಸಭೆಗೆ ಶುಭವನ್ನು ಹಾರೈಸಿ ಸಂಘವು ಇನ್ನಷ್ಟು ವಿಶಿಷ್ಟ ರೀತಿಯ ಯೋಜನೆಗಳನ್ನು ರೂಪಿಸಿ ಹಲವಾರು ಶಾಖೆಗಳನ್ನು ತೆರೆದು ಜನರಿಗೆ ಉತ್ತಮ ಸೇವೆಯನ್ನು ನೀಡುವಂತಾಗಲಿ ಎಂದು ಆಶಿಸಿದರು. ಸಂಘದ ಸದಸ್ಯರಾದ ಶ್ರೀಧರ್ ಭಟ್ ರವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿ, ಮಾತನಾಡಿದ ಚಿತ್ತರಂಜನ್ ಬೋಳಾರ್ ರವರು ಶಾಖೆಯು ಪ್ರಥಮ ವರ್ಷದಲ್ಲೇ ಲಾಭಗಳಿಸಿದೆ. ಶಾಖೆಯಿಂದ ಹೆಚ್ಚಿನ ಠೇವಣಿಯನ್ನು ಸಂಗ್ರಹಿಸಿದ್ದು ಆ ಠೇವಣಿಯಿಂದ ಹೆಚ್ಚಿನ ಸಾಲವನ್ನು ನೀಡಲು ಸಾಧ್ಯವಾಗಿದೆ. ಸಂಘದ ಪ್ರತಿ ಸದಸ್ಯನಿಗೆ 5ಷೇರು ಪಡೆಯುವ ಅವಕಾಶವಿದ್ದು ಗ್ರಾಹಕರು ಹೆಚ್ಚುವರಿ ಷೇರುಗಳನ್ನು ಪಡೆಯುವಂತೆ ವಿನಂತಿಸಿದರು. ಈಗಾಗಲೇ ಠೇವಣಿ ಮೇಲಿನ ಬಡ್ಡಿ ದರವನ್ನು 9.50%ಗೆ ಏರಿಕೆ ಮಾಡಲಾಗಿದೆ ಎಂದು ತಿಳಿಸಿದರು. ಸಂಘವು ಈ ಕಿರು ಅವಧಿಯಲ್ಲಿ ಬೆಳೆಯಬೇಕಾದರೆ ಸಂಘದ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರ ಪರಿಶ್ರಮ ಹಾಗೂ ಗ್ರಾಹಕರ ಸಹಕಾರದಿಂದ ಸಾದ್ಯವಾಗಿದೆ ಎಂದರು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷರಾದ ನೇಮಿರಾಜ್ ಪಿ, ನಿರ್ದೇಶಕರಾದ ಸೀತಾರಾಮ್ ಎನ್, ಗೋಪಾಲ್ ಎಮ್, ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿ ಸೌಮ್ಯ ವಿಜಯ್, ಮತ್ತಿತ್ತರರು ಉಪಸ್ಥಿತರಿದ್ದರು. ಶಾಖೆಯ ಶಾಖಾಧಿಕಾರಿ ಸುರಕ್ಷಾ ಇವರು ಸ್ವಾಗತಿಸಿ, ಸಿಬ್ಬಂದಿಯಾದ ಪ್ರಜ್ಞಾರವರು ವಂದಿಸಿ ಮಾನವ ಸಂಪನ್ಮೂಲ ಅಧಿಕಾರಿ ದೀಪಿಕ ಸನಿಲ್‌ರವರು ಕಾರ್ಯಕ್ರಮ ನಿರೂಪಿಸಿದರು.

## ಸಹಕಾರ ಸಂಘಗಳ ನೌಕರರು ಮತ್ತವರ ಕುಟುಂಬದವರು 'ಯಶಸ್ವಿನಿ' ಸದಸ್ಯರಾಗಬಹುದು ಅವಿಭಕ್ತ ಕುಟುಂಬದ ಎಲ್ಲ ಸದಸ್ಯರಿಗೂ 'ಯಶಸ್ವಿನಿ' ವಿಸ್ತರಣೆ : ಎಂ. ವೆಂಕಟಸ್ವಾಮಿ

**ಬೆಂಗಳೂರು :** 2023–24ನೇ ಸಾಲಿನಲ್ಲಿ ಕಾರ್ಯನಿರತ ಸಹಕಾರ ಸಂಘಗಳಲ್ಲಿ ಮಾಸಿಕ ಒಟ್ಟು ವೇತನ ರೂ.30 ಸಾವಿರ ಅಥವಾ ಅದಕ್ಕಿಂತ ಕಡಿಮೆ ವೇತನ ಪಡೆಯುತ್ತಿರುವ ನೌಕರರು ಮತ್ತು ಅವರ ಕುಟುಂಬದ ಸದಸ್ಯರು ಯಶಸ್ವಿನಿ ಯೋಜನೆಯಡಿ ಸದಸ್ಯರಾಗಲು ಸರ್ಕಾರ ಅವಕಾಶ ಕಲ್ಪಿಸಿಕೊಟ್ಟಿದೆ ಎಂದು ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್‌ನ ಮುಖ್ಯಕಾರ್ಯನಿರ್ವಹಣಾಧಿಕಾರಿ ಎಂ. ವೆಂಕಟಸ್ವಾಮಿ ತಿಳಿಸಿದರು. ಸಹಕಾರ ಸಂಘಗಳ ಜಂಟಿ ನಿಬಂಧಕರ ಕಛೇರಿಯಲ್ಲಿ ಇಲಾಖೆಯ ಅಧಿಕಾರಿಗಳು ಹಾಗೂ ಸಹಕಾರ ಸಂಘಗಳ ಕಾರ್ಯದರ್ಶಿಗಳಿಗೆ ಹಮ್ಮಿಕೊಳ್ಳಲಾದ 'ಯಶಸ್ವಿನಿ' ಯೋಜನೆಯ ನೋಂದಣಿ ಪ್ರಕ್ರಿಯೆಗೆ ಸಂಬಂಧಿಸಿದ ಅರಿವು ಕಾರ್ಯಾಗಾರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಸರ್ಕಾರ ಈ ಸಾಲಿನಲ್ಲಿ ರೇಷನ್ ಕಾರ್ಡ್ ಹೊಂದಿರುವ ಅವಿಭಕ್ತ ಕುಟುಂಬಗಳಿಗೆ ಯಶಸ್ವಿನಿಯ ಯೋಜನೆಯನ್ನು ವಿಸ್ತರಿಸಿದೆ. ಸಹಕಾರ ಸಂಘಗಳಿಗೆ ಪ್ರೋತ್ಸಾಹ ಧನವನ್ನು ಪ್ರತಿ ಕಾರ್ಡಿಗೆ ರೂ. 25/– ಗಳನ್ನು ಹೆಚ್ಚಿಸಲಾಗಿದೆ. ನವಜಾತ ಶಿಶುವಿಗೂ ತಾಯಿಯ ಹೆಸರಿನಲ್ಲಿ ಒಂದು ವರ್ಷದ ವರೆಗೆ ಚಿಕಿತ್ಸೆ ಪಡೆಯಲು ಅವಧಿಯನ್ನು ವಿಸ್ತರಿಸಲಾಗಿದೆ ಎಂದು ತಿಳಿಸಿದರು. ಯಶಸ್ವಿನಿ ಯೋಜನೆಯಡಿ ಫಲಾನುಭವಿ ಕುಟುಂಬಕ್ಕೆ ವಾರ್ಷಿಕ ವೈದ್ಯಕೀಯ ಚಿಕಿತ್ಸಾ ವೆಚ್ಚದ ಗರಿಷ್ಠ ಮಿತಿ ರೂ. 5.00 ಲಕ್ಷಕ್ಕೆ ನಿಗದಿಪಡಿಸಲಾಗಿದೆ.

ಯಶಸ್ವಿನಿ ಯೋಜನೆಯಡಿ ಸದಸ್ಯರಾಗಬಯಸುವ ಪ್ರತಿಯೊಬ್ಬರೂ ವರ್ಷಕ್ಕೆ ನಿಗದಿತ ಪ್ರಮಾಣದ ವಂತಿಗೆ ಹಣ ಪಾವತಿಸಬೇಕಾಗುತ್ತದೆ. ಗ್ರಾಮೀಣ ಪ್ರದೇಶದ ಸಹಕಾರಿ ಸಂಘಗಳ ಮತ್ತು ಸ್ವ–ಸಹಾಯ ಗುಂಪುಗಳ ಗರಿಷ್ಠ ನಾಲ್ಕು ಜನರ ಕುಟುಂಬಕ್ಕೆ ತಲಾ ವಾರ್ಷಿಕ ರೂ.





500 ವಂತಿಗೆ ಹಾಗೂ ನಾಲ್ಕಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಶೇ. 20% ಹೆಚ್ಚುವರಿಯಾಗಿ ಅಂದರೆ ಪ್ರತಿ ಹೆಚ್ಚುವರಿ ಸದಸ್ಯರಿಗೆ ರೂ.100ಗಳನ್ನು ಪಾವತಿಸಬೇಕಾಗುತ್ತದೆ ಎಂದರು. ನಗರ ಪ್ರದೇಶದ ಸಹಕಾರ ಸಂಘಗಳ ಗರಿಷ್ಠ ನಾಲ್ಕು ಮಂದಿ ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ ರೂ. 1000 ವಂತಿಗೆ ನಿಗದಿ ಪಡಿಸಲಾಗಿದೆ. ನಾಲ್ಕು ಮಂದಿಗಿಂತ ಹೆಚ್ಚಿನ ಸದಸ್ಯರು ಇರುವ ಕುಟುಂಬಗಳಿಗೆ ಹೆಚ್ಚುವರಿ ಸದಸ್ಯರಿಗೆ ತಲಾ ರೂ. 200ಗಳ ವಂತಿಗೆ ಪಾವತಿಸಿ ನೋಂದಾಯಿಸಬಹುದಾಗಿದೆ.

ಬೆಂಗಳೂರು ಪ್ರಾಂತ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಅಶ್ವಥನಾರಾಯಣ ರವರು ಮಾತನಾಡಿ, 2023–24ನೇ ಸಾಲಿನ ಯಶಸ್ವಿನಿ ಯೋಜನೆ ನೋಂದಣಿ ಪ್ರಕ್ರಿಯೆ ತಕ್ಷಣದಿಂದ ಪ್ರಾರಂಭವಾಗಲಿದ್ದು, ನೋಂದಣಿ ಪ್ರಕ್ರಿಯೆಯಲ್ಲಿ ಲೋಪಗಳು ಆಗದಂತೆ ಅಧಿಕಾರಿಗಳು ಮತ್ತು ಸಹಕಾರ ಸಂಘಗಳ ಕಾರ್ಯದರ್ಶಿಗಳು ನಿಗಾ ವಹಿಸಬೇಕು. ರಾಜ್ಯದ ಸಹಕಾರಿಗಳ ಬಾಗಿಲಿಗೆ ಗುಣಮಟ್ಟದ ಆರೋಗ್ಯ ಸೌಲಭ್ಯ ತಲುಪಿಸುವ ಉದ್ದೇಶದಿಂದ ಎಲ್ಲರೂ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಎಂದರು.

ಸಭೆಯಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕರಾದ ಬಿ.ಆರ್. ಲಿಂಗರಾಜು, ಜಂಟಿ ನಿಬಂಧಕರಾದ ಯಶಸ್ವಿನಿ, ಉಪನಿಬಂಧಕರು, ಸಹಾಯಕರ ನಿಬಂಧಕರು, ಸಹಕಾರ ಅಭಿವೃದ್ಧಿ ಅಧಿಕಾರಿಗಳು, ವಿವಿಧ ಸಹಕಾರ ಸಂಘಗಳ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.



## ನೂತನ ಆಡಳಿತಮಂಡಳಿಯ ನಿರ್ದೇಶಕರಾಗಿ ಆಯ್ಕೆ

ಪತ್ತಿನ ಮಹಾಮಂಡಳದ ನಿರ್ದೇಶಕರಾದ ಶ್ರೀ ಬಿ.ಡಿ. ಭೂಕಾಂತರವರು ಕರ್ನಾಟಕ ರಾಜ್ಯ ಪರಿಸರ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಸಹಕಾರ ಸಂಘ ನಿ., ಶಿಕಾರಿಪುರ ಇದರ ನೂತನ ಆಡಳಿತಮಂಡಳಿಯ ನಿರ್ದೇಶಕರಾಗಿ ಆಯ್ಕೆಯಾಗಿರುತ್ತಾರೆ.

## ಮಹಾಮಂಡಳದ ಸಹಕಾರ ಶಿಕ್ಷಣ, ತರಬೇತಿ ಪರಿಣಾಮಕಾರಿಯಾಗಿದೆ : ವಿ. ರಾಜು

# ತರಬೇತಿಯ ಪ್ರಯೋಜನ ಪಡೆದುಕೊಳ್ಳಿ – ಕೆ.ಎಸ್. ನವೀನ್



**ಹಾಸನ :** ಸಹಕಾರ ಕ್ಷೇತ್ರದಲ್ಲಿ ಪತ್ತಿನ ಸಹಕಾರ ಸಂಘಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವುಗಳ ಬೆಳವಣಿಗೆಗೆ ಅಗತ್ಯವಿರುವ ಶಿಕ್ಷಣ ಹಾಗು ತರಬೇತಿಯನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಪರಿಣಾಮಕಾರಿಯಾಗಿ ಆಯೋಜನೆ ಮಾಡುತ್ತಿರುವ ಕಾರ್ಯ ಶ್ಲಾಘನೀಯವಾದುದು. ಹಾಗು ತರಬೇತಿಯ ಪ್ರಯೋಜನೆ ಪಡೆದು ವೃತ್ತಿಪರತೆಯಿಂದ ಕಾರ್ಯನಿರ್ವಹಿಸಲು ಈ ಕಾರ್ಯಗಾರ ಅತ್ಯುತ್ತಮ ವೇದಿಕೆಯಾಗಿದೆ ಎಂದು ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ವಿ.ರಾಜುರವರು ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ, ಹಾಸನ ಜಿಲ್ಲಾ ಸಹಕಾರ ಒಕ್ಕೂಟ, ಮತ್ತು ಸಹಕಾರ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಮೈಸೂರು ವಿಭಾಗದ ಪತ್ತಿನ ಸಹಕಾರ ಸಂಘಗಳ ಸರ್ವತೋಮುಖ ಅಭಿವೃದ್ಧಿಗಾಗಿ ಅಧ್ಯಕ್ಷರು, ನಿರ್ದೇಶಕರುಗಳಿಗೆ ಹಾಸನದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಏರ್ಪಡಿಸಿದ್ದ ಒಂದು ದಿನದ ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಜಯಕರ ಶೆಟ್ಟಿ ಇಂದ್ರಾಳಿಯವರು ಮಾತನಾಡುತ್ತಾ, ಸಹಕಾರ ಸಂಘಗಳು ಸ್ಪರ್ಧಾತ್ಮಕವಾಗಿ ಕಾರ್ಯನಿರ್ವಹಿಸಬೇಕು. ಬದ್ದತೆ, ಪ್ರಾಮಾಣಿಕತೆ, ನಿಷ್ಠೆಯಿಂದ ಕೆಲಸ ನಿರ್ವಹಿಸಿದ್ದಲ್ಲಿ ಸಹಕಾರ ಸಂಘಗಳು ಉನ್ನತ ಮಟ್ಟದಲ್ಲಿ ಬೆಳೆಯಲು ಸಹಕಾರಿಯಾಗಲಿದೆ ಎಂದರು. ಮಹಾಮಂಡಳದ ನಿರ್ದೇಶಕರಾದ ಬಿ.ಸಿ. ಲೋಕಪ್ಪಗೌಡರವರು ಶಿಬಿರಾರ್ಥಿಗಳಿಗೆ ಮಹಾಮಂಡಳ ನೀಡುವ ತರಬೇತಿಯ ಪ್ರಯೋಜನ ಪಡೆಯಲು ತಿಳಿಸಿದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಸ್.ನವೀನ್‌ರವರು ಮಾತನಾಡಿ, ಸಹಕಾರ ಮಹಾಮಂಡಳವು ಕಾಲಕಾಲಕ್ಕೆ ಏರ್ಪಡಿಸುವ ಎಲ್ಲ ರೀತಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಳ್ಳಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾದ ಪ್ಪಟ್ಟಸ್ವಾಮಿಗೌಡರವರು ಮಾತನಾಡುತ್ತಾ, ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳು ನೀಡುವ ಉಪನ್ಯಾಸದ ಪ್ರಯೋಜನ ಪಡೆದು ಸಹಕಾರ ಸಂಘಗಳನ್ನು ಅಭಿವೃದ್ಧಿ ಪಡಿಸಲು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಮಾಜಿ ನಿರ್ದೇಶಕರಾದ ಆರ್.ಟಿ. ದ್ಯಾವೇಗೌಡ, ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಚಿತ್ತರಂಜನ್ ಬೋಳಾರ್, ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಆರ್.ಜೆ. ಕಾಂತರಾಜು, ಸಹಕಾರ ಸಂಘಗಳ ಉಪನಿಬಂಧಕರಾದ ಜಿ.ಆರ್. ವಿಜಯ್‌ಕುಮಾರ್, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಮಹಾಮಂಡಳದ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಕೆ.ಎನ್. ಪ್ರಜ್ವಲ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಗುರುಸ್ವಾಮಿಯವರು ಪತ್ತಿನ ಸಹಕಾರ ಸಂಘಗಳಲ್ಲಿ ಸಾಲ ವಸೂಲಾತಿ ಕ್ರಮಗಳು ಹಾಗೂ ಬೆಂಗಳೂರಿನ ಸನ್ನದು ಲೆಕ್ಕಪರಿಶೋಧಕರಾದ ಅನಿಲ್ ಭಾರಧ್ವಾಜ್‌ರವರು ಪತ್ತಿನ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ಕುರಿಂತೆ ಉಪನ್ಯಾಸ ನೀಡಿದರು.






# ಅಂತಾರಾಷ್ಟ್ರೀಯ ಸಹಕಾರ ವರ್ಷ – 2025 : ಪ್ರಾಮುಖ್ಯತೆ; ಒಂದು ಅವಲೋಕನ

▸▸ **ಶಶಿಧರ ಎಲೆ,** ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಬೆಂಗಳೂರು.



ವಿಶ್ವ ಸಂಸ್ಥೆ 2025ನೇ ವರ್ಷವನ್ನು ಅಂತಾರಾಷ್ಟ್ರೀಯ ಸಹಕಾರ ವರ್ಷ ಎಂದು ಘೋಷಿಸಿದೆ. ಈ ಹಿಂದೆ ಮೊದಲ ಬಾರಿಗೆ 2012ನ್ನು ಅಂತಾರಾಷ್ಟ್ರೀಯ ಸಹಕಾರ ವರ್ಷ ಎಂದು ಘೋಷಿಸಲಾಗಿತ್ತು. ಅದರ ಯಶಸ್ಸು ಕಂಡ ವಿಶ್ವ ಸಂಸ್ಥೆ ಮತ್ತೊಮ್ಮೆ ಅಂತಾರಾಷ್ಟ್ರೀಯ ಸಹಕಾರ ವರ್ಷವನ್ನು 12 ವರ್ಷಗಳ ನಂತರ ಘೋಷಿಸಿದೆ ಎಂದು 'ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆ' ಪ್ರಕಟಿಸಿದೆ. ಇದು ಸಹಕಾರಿಗಳೆಲ್ಲರೂ ಸಂಭ್ರಮಿಸುವ ವಿಷಯವಾಗಿರುತ್ತದೆ. ವಿಶ್ವ ಸಂಸ್ಥೆಯ ಈ ಘೋಷಣೆಗೆ ಕಾರಣ ಸಹಕಾರ ಸಂಘಗಳ 'ಆರ್ಥಿಕ ಬೆಳವಣಿಗೆಯೊಂದಿಗಿನ ಸಾಮಾಜಿಕ ಅಭಿವೃದ್ಧಿ' ಕಾರ್ಯಕ್ರಮಗಳು ಎಂದು ಸಂಬಂಧಿಸಿದ ಲೇಖನವೊಂದು ತಿಳಿಸಿದೆ. ಇದುವೇ ವಿಶ್ವ ಸಂಸ್ಥೆಯ ನಿರ್ಧಾರಕ್ಕೆ ಕಾರಣವಾಗಿರುತ್ತದೆ. ಅದರಂತೆ ವಿಶ್ವಸಂಸ್ಥೆಯ ಸಾಮಾನ್ಯ ನಿಕಾಯವು ದಿನಾಂಕ 22ನೇ ನವೆಂಬರ್ 2023 ರ ತನ್ನ ಠರಾವು ಮಾಡಿದೆ.



ವಿಶ್ವದ 'ಸುಸ್ಥಿರ ಅಭಿವೃದ್ಧಿ' ಗುರಿ ಸಾಧನೆಗೆ ಸಹಕಾರ ಸಂಘಗಳು ಸಾಧನವಾಗುತ್ತದೆ ಎಂಬುದು ವಿಶ್ವ ಸಂಸ್ಥೆಯ ಬಲವಾದ ನಂಬಿಕೆ. ವಿಶ್ವದಲ್ಲಿ 3 ದಶಲಕ್ಷ ಸಹಕಾರ ಸಂಘಗಳು ಇದ್ದು ವಿಶ್ವದ ಜನಸಂಖ್ಯೆಯ ಶೇ. 12 ಜನರು ಸದಸ್ಯರಾಗಿರುತ್ತಾರೆ ಎಂಬ ಅಂದಾಜಿದೆ. ಭಾರತದಲ್ಲಿ 7.89 ಕೋಟಿ ಸಹಕಾರ ಸಂಘಗಳಿದ್ದು 29 ಕೋಟಿ ಸದಸ್ಯರಿದ್ದಾರೆ ಎಂಬ ಅಂದಾಜಿದೆ. ಈ ವಾಹಕಗಳು (ಸಹಕಾರ ಸಂಘಗಳು) ಸುಸ್ಥಿರ ಅಭಿವೃದ್ಧಿಯ ಪ್ರಮುಖ ಗುರಿಗಳಾದ ಆಹಾರ ಭದ್ರತೆ, ಬಡತನ ನಿರ್ಮೂಲನೆ, ಪರಿಸರ ಸಮತೋಲನವನ್ನು ಕಾಪಾಡಿಕೊಂಡು ಮುಂದಿನ ಪೀಳಿಗೆಗೆ ಉತ್ತಮವಾಗಿ ಜೀವಿಸಬಲ್ಲ ವಿಶ್ವವನ್ನು ನೀಡುವುದಲ್ಲದೇ ಸಮತಾ ಸಮಾಜವನ್ನು ನಿರ್ಮಾಣ ಮಾಡಬಲ್ಲವು ಎಂಬುದು ಸದಾಶಯ. ಮತ್ತು ಇದು ಸಾಧ್ಯ ಕೂಡ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಇದಕ್ಕೆ ಸೂಕ್ತ ಪರಿಸರವನ್ನು ಕಲ್ಪಿಸಿಕೊಡುವುದು ಆಯಾ ಸರ್ಕಾರಗಳ ಮತ್ತು ಸಮುದಾಯದ ಜವಾಬ್ದಾರಿಯಾಗುತ್ತದೆ. ಇದೇ ಅತ್ಯಂತ ದುಸ್ತರ ಸವಾಲಾಗಿರುತ್ತದೆ.

ವಿಶ್ವ ಸಂಸ್ಥೆಯು ಸಹಕಾರ ಸಂಘಗಳು ಸುಸ್ಥಿರ ಅಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಾಧಿಸಬಲ್ಲವು ಎಂಬ ಅರಿವು ಮೂಡಿಸುವ ಸಲುವಾಗಿ ಪ್ರಚಾರಾಂದೋಲನವಾಗಿ 2025ನ್ನು ಅಂತಾರಾಷ್ಟ್ರೀಯ ಸಹಕಾರ ವರ್ಷ ಎಂದು ಘೋಷಿಸಿದೆ. ಈ ದಿಸೆಯಲ್ಲಿ ಹಾಲಿ ಇರುವ ಶಾಸನಗಳು, ನಿಯಂತ್ರಣ ವ್ಯವಸ್ಥೆಗಳ ಪುನರ್ ಪರಿಶೀಲನೆ, ಪುನರಾವಲೋಕನ ಮಾಡಿ ಸಹಕಾರ ಸಂಘಗಳ ಅಭ್ಯುದಯಕ್ಕೆ ಸರ್ಕಾರಗಳು, ಸಂಬಂಧಿಸಿದ ಸಂಸ್ಥೆಗಳು ಕಾರ್ಯಕ್ರಮ ಗಳನ್ನು ಹಾಕಿಕೊಳ್ಳಬೇಕೆಂದು ವಿಶ್ವ ಸಂಸ್ಥೆ ಬಯಸಿದೆ. ಅಲ್ಲದೆ ವಿಶೇಷವಾಗಿ ಆಹಾರ ಉತ್ಪಾದನೆ ಮತ್ತು ಮಾರುಕಟ್ಟೆ ವಲಯದ ಸಹಕಾರ ಸಂಘಗಳಲ್ಲಿ ಬಂಡವಾಳದ ಹೆಚ್ಚಳ, ಪೂರಕವಾದ ಮಾರುಕಟ್ಟೆ, ನ್ಯಾಯಯುತವಾದ ಬೆಲೆ ದೊರಕುವುದು ಮತ್ತು ಇದಕ್ಕೆ ಅಗತ್ಯ ವಾತಾವರಣ ನಿರ್ಮಾಣ ಮಾಡಲು ಕರೆಕೊಟ್ಟಿದೆ. ಇದರಲ್ಲಿ ಮಹಿಳೆಯರ, ಅಬಲ ವರ್ಗಗಳ ಪಾತ್ರ ಮತ್ತು ಅವರಿಗೆ ಪ್ರಾಮುಖ್ಯತೆ ನೀಡುವ ಬಗ್ಗೆ ಮತ್ತು ಅವರ

'ಸಾಮರ್ಥ್ಯಾಭಿವೃದ್ಧಿ' ಕಾರ್ಯಕ್ರಮಗಳಿಗೆ ಒತ್ತು ನೀಡಬೇಕಾದ ಅವಶ್ಯಕತೆ ಬಗ್ಗೆ ತಿಳಿಹೇಳಲಾಗಿದೆ.

ಸುಸ್ಥಿರ ಅಭಿವೃದ್ಧಿಗೆ ಕಾರಣವಾಗಬಲ್ಲ 'ಸಾಮಾಜಿಕ ಮತ್ತು ಐಕ್ಯಮತ್ಯ ಆರ್ಥಿಕತೆ' (Social and Solidarity Economy -SSE) ಸಂಸ್ಥೆಗಳೆಂದರೆ "ಸಾಮೂಹಿಕ ಮತ್ತು/ಅಥವಾ ಸಾಮಾನ್ಯ ಆಸಕ್ತಿಯ ಆರ್ಥಿಕ, ಸಾಮಾಜಿಕ ಮತ್ತು ಪರಿಸರ ಕಾಳಜಿಯ ಚಟುವಟಿಕೆಗಳನ್ನು ಕೈಗೊಳ್ಳುತ್ತಿರುವ ಔದ್ಯೋಗಿಕ ಸಂಸ್ಥೆಗಳು, ಸಂಸ್ಥೆಗಳು ಮತ್ತು ಘಟಕಗಳು" ಎಂದು ವ್ಯಾಖ್ಯಾನಿಸಲಾಗಿದೆ. ಅಲ್ಲದೆ "ಸ್ವಯಂ ಸಹಕಾರ ಮತ್ತು ಪರಸ್ಪರ ಸಹಕಾರ, ಪ್ರಜಾಪ್ರಭುತ್ವ ಮತ್ತು/ಅಥವ ಎಲ್ಲರ ಭಾಗವಹಿಸುವಿಕೆಗೆ ಅವಕಾಶವುಳ್ಳ ಆಡಳಿತ, ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವುಳ್ಳ, ಮತ್ತು ಹೆಚ್ಚುವರಿ ಹಂಚಿಕೆಯಲ್ಲಿ ಮತ್ತು ಹೆಚ್ಚುವರಿ ಮೊತ್ತ ಮತ್ತು ಅಥವ ಲಾಭ ಹಂಚಿಕೆಯಲ್ಲಿ ಬಂಡವಾಳ ಮೀರಿ ಜನತೆಗೆ ಪ್ರಥಮ ಆದ್ಯತೆ" ಎಂದು ತಿಳಿಸಿದೆ. ಈ ಎಲ್ಲ ಗುಣಲಕ್ಷಣಗಳನ್ನು ಸಹಕಾರ ಸಂಘಗಳು ಹೊಂದಿದ್ದು 'ಅಭಿವೃದ್ಧಿ' ಯಲ್ಲಿ ಅತ್ಯಂತ ಪ್ರಾಮುಖ್ಯತೆ, ಆದ್ಯತೆಯನ್ನು ಸಹಕಾರ ಸಂಘಗಳಿಗೆ ನೀಡಬೇಕಾಗಿರುವುದು ಈ ಶತಮಾನದ ಅವಶ್ಯಕತೆಯಾಗಿದೆ.



ಈ ಹಿನ್ನೆಲೆಯಲ್ಲಿ, ಭಾರತವು ಭಾರತದ ಆರ್ಥಿಕ ಸಚಿವರು ಸಾರ್ವಜನಿಕವಾಗಿ ತಿಳಿಸಿದಂತೆ ನಾಲ್ಕು ಟ್ರಿಲಿಯನ್ ಡಾಲರ್ ಆರ್ಥಿಕತೆ ತಲುಪಿರುತ್ತದೆ. 2028ರ ಒಳಗೆ ಐದು ಟ್ರಿಲಿಯನ್ ಡಾಲರ್ ಆರ್ಥಿಕತೆ ತಲುಪುವ ಗುರಿ ಹೊಂದಲಾಗಿದೆ. ಇತ್ತೀಚೆಗೆ 'ಕೇಂದ್ರ ಸಹಕಾರ ಸಂಘಗಳ ನಿಬಂಧಕರ' (Central Registrar of cooperative societies) ಕಛೇರಿ ಉದ್ಘಾಟನಾ ಸಮಾರಂಭದಲ್ಲಿ ಕೇಂದ್ರ ಸರಕಾರದ ಸಹಕಾರ ಸಚಿವರು ದೇಶದ ಐದು ಟ್ರಿಲಿಯನ್ ಡಾಲರ್ ಆರ್ಥಿಕತೆಗೆ 'ಸಹಕಾರ ಸಂಘಗಳು' ತನ್ನ ಕೊಡುಗೆ ನೀಡುವುದರ ಪ್ರಾಮುಖ್ಯತೆ ಬಗ್ಗೆ ತಿಳಿಸಿದ್ದಾರೆ. ಬಹು ರಾಜ್ಯ ಕಾಯ್ದೆಯಡಿಯಲ್ಲಿ ಹೆಚ್ಚುವರಿಯಾಗಿ ಸಹಕಾರ ಸಂಘಗಳು ನೊಂದಣಿ ಯಾಗಿರುವ ಬಗ್ಗೆ ಮಾಹಿತಿ ತಿಳಿಸಿರುತ್ತಾರೆ. ಅಲ್ಲದೆ ಆಹಾರ ಉತ್ಪಾದನೆ ಮಾರಾಟ ರಫ್ತು ಸಹಕಾರ ಸಂಘವನ್ನು ಮತ್ತು ಇತರೆ ಮೂರು ರೀತಿಯ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಒಂದು ಲಕ್ಷದಿಂದ ಮೂರು ಲಕ್ಷಕ್ಕೆ ಏರಿಸುವುದು ಇವುಗಳನ್ನು ರೈತ ವಿವಿದೋದ್ದೇಶ ಸಹಕಾರ ಸಂಘಗಳಾಗಿ ಪರಿವರ್ತಿಸಿ ಅಲ್ಪಾವಧಿಯ ಬೆಳೆಸಾಲ ಅಲ್ಲದೆ ಇತರೆ ಕೃಷಿ ಪೂರಕ, ಕೃಷಿ ಅವಲಂಬಿತ ಉದ್ದೇಶಗಳಿಗೂ, ಹೈನುಗಾರಿಕೆ, ಮೀನುಗಾರಿಕೆ, ನೇಕಾರಿಕೆ ಮುಂತಾದ ಗ್ರಾಮೀಣ ಪ್ರದೇಶದ ಇತರೆ ಎಲ್ಲ ರೀತಿಯ ಉದ್ಯೋಗಗಳಿಗೆ 'ದುಡಿಯುವ ಬಂಡವಾಳ' ಸಾಲವನ್ನು ಒದಗಿಸಲು ಉದ್ದೇಶಿಸಿದೆ. ಇದಲ್ಲದೆ ಒಟ್ಟು 60 ಉಪಕ್ರಮಗಳನ್ನು ಕೈಗೊಳ್ಳಲಾಗಿರುವುದಾಗಿ ಕೇಂದ್ರ ಸಹಕಾರ ಸಚಿವರು ತಿಳಿಸಿರುತ್ತಾರೆ.

ಈ ಉಪಕ್ರಮಗಳಿಗೆ ಸಹಕಾರ ಚಳುವಳಿಯು ಸಕಾರಾತ್ಮಕವಾಗಿ ಸ್ಪಂದಿಸಿ ಕಾರ್ಯನಿರ್ವಹಿಸಿದಲ್ಲಿ ಈ ಆಶಯವನ್ನು ಪೂರೈಸಬಹುದಾಗಿದೆ. ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳಿಗೆ ದತ್ತಾಂಶ ಲಭ್ಯತೆ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಸಹಕಾರ ವಲಯದ ಬಗ್ಗೆ ಅಂಕಿ ಅಂಶಗಳ ಸಂಗ್ರಹಣೆಗೆ ಪ್ರಾಮುಖ್ಯತೆ ನೀಡುವ ಬಗ್ಗೆ 2005ರ ಅಂತಾರಾಷ್ಟ್ರೀಯ ಸಹಕಾರ ವರ್ಷ ಘೋಷಣೆಯಲ್ಲಿ ಉಲ್ಲೇಖಿಸಿರುತ್ತಾರೆ. ಮಾಹಿತಿ ತಂತ್ರಜ್ಞಾನದ ಕ್ರಾಂತಿಯಾಗಿದ್ದು ಅದರ ಸದುಪಯೋಗವನ್ನು ಈ ವಲಯ ಕೈಗೊಳ್ಳಬೇಕಾಗಿದೆ. ಬಹುಹಂತದ ಸಹಕಾರ ವ್ಯವಸ್ಥೆಯಲ್ಲಿ ಉನ್ನತ ಸಂಸ್ಥೆಗಳು, ನಿಬಂಧಕರು, ಇದರ ಸದುಪಯೋಗವನ್ನು ಪಡೆಯಬೇಕಾಗಿದೆ. ಲಭ್ಯ ಅಂಕಿ ಅಂಶಗಳಂತೆ ಭಾರತದ ಆರ್ಥಿಕತೆಯಲ್ಲಿ ಕೃಷಿ ಮತ್ತು ಕೃಷಿ ಅವಲಂಬಿತ ವೃತ್ತಿಗಳ ಕೊಡುಗೆ ಶೇ.20.19, ಕೈಗಾರಿಕೆ – ಶೇ.25.92, ಸೇವಾ ವಲಯ – 53.89, ಆಗಿರುತ್ತದೆ. ಹಾಲಿ ಸಕ್ರಿಯ ಸಹಕಾರ ಚಳವಳಿಯ ಮೇಲ್ನೋಟಕ್ಕೆ ಕಂಡುಬರುವಂತೆ ಇದರ ಕೊಡಗೆ ಶ್ಲಾಘನೀಯ ವಾಗಿರುವುದಿಲ್ಲ ಎಂದು ತಿಳಿಯುತ್ತಿದೆ. ಉದಾಹರಣೆಗೆ ಪತ್ತಿನ ವಲಯದಲ್ಲಿ ಸಹಕಾರದ ಕೊಡುಗೆ ಶೇ.19. ಹೈನುಗಾರಿಕೆ ಶೇ 35, ದಾನ್ಯ, ಹಣ್ಣು, ತರಕಾರಿ ವಲಯಗಳಲ್ಲಿ ಕೇವಲ ಧರ ನಿಗದಿ ಪಡಿಸಲು ನಿಯಂತ್ರಣದಲ್ಲಿ ಸಹಕಾರವಾಗಿರುತ್ತದೆ. ರಸಗೊಬ್ಬರ ತಯಾರಿಕೆಯಲ್ಲಿ ಶೇ.80 ಇರುತ್ತದೆ. ಇತರೆ ವಲಯಗಳು ಅತಿ ಕನಿಷ್ಠ ಮಟ್ಟದಲ್ಲಿರುತ್ತದೆ ಎಂಬುದು ವಿಷಾದನೀಯ. ಖಾಸಗಿ ವಲಯದ ಸ್ಪರ್ಧೆಯಲ್ಲಿ ನಲುಗಿದೆ ಎಂದರೆ ತಪ್ಪಾಗಲಾರದು. ಈ ಹಿನ್ನಲೆಯಲ್ಲಿ 2025 ಅಂತಾರಾಷ್ಟ್ರೀಯ ಸಹಕಾರ ವರ್ಷಾಚರಣೆ ಯನ್ನು ಭಾರತದ ಸಹಕಾರಿಗಳು ತಮ್ಮ ಸಾಮರ್ಥ್ಯವನ್ನು ವೃದ್ಧಿಸುವ ಬಗ್ಗೆ ತನ್ನ ವೈಫಲ್ಯತೆಗಳನ್ನು ಸಾಮರ್ಥ್ಯವಾಗಿ ಪರಿವರ್ತಿಸುವ ಬಗ್ಗೆ, ಇರುವ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳುವ ಬಗ್ಗೆ ಸವಾಲುಗಳನ್ನು ಸಮರ್ಥವಾಗಿ ಅತ್ಯುತ್ತಮ ನಾಯಕತ್ವದಿಂದ ಎದುರಿಸಬೇಕಾಗಿದೆ.

**"ಪ್ರತಿ ದಿನ ತಮ್ಮದೇ ದಾಖಲೆಗಳನ್ನು ತಾವೇ ಮುರಿಯಿರಿ. ಏಕೆಂದರೆ, ಯಶಸ್ಸು ಎಂಬುದು ತಮ್ಮೊಂದಿಗೆ ತಾವೇ ನಡೆಸುವ ಕಾಳಗದಿಂದ ಬರುತ್ತದೆ." – ಚಂದ್ರಶೇಖರ ಅಜಾದ್**

# ಸಹಕಾರಿಗಳ ಆರೋಗ್ಯ ಸಂಜೀವಿನಿ – ಯಶಸ್ವಿನಿ 50 ಲಕ್ಷ ಸದಸ್ಯತ್ವ ನೋಂದಣಿ ಗುರಿ; ಸಹಕಾರ ಸಂಘಗಳ ನೌಕರರಿಗೂ ಮತ್ತವರ ಕುಟುಂಬಕ್ಕೂ ಸದಸ್ಯರಾಗಲು ಅವಕಾಶ; ಅವಿಭಕ್ತ ಕುಟುಂಬದ ಎಲ್ಲ ಸದಸ್ಯರಿಗೂ ಯಶಸ್ವಿನಿ ಸೌಲಭ್ಯ ವಿಸ್ತರಣೆ

**ಯಶಸ್ವಿನಿ ಯೋಜನೆಯಡಿ ರಾಜ್ಯದಲ್ಲಿ ಒಟ್ಟು 48.00 ಲಕ್ಷ ಸದಸ್ಯರ ನೋಂದಣಿಯಾಗಿದೆ. ಎಲ್ಲಾ ಜಿಲ್ಲೆಗಳಲ್ಲೂ ಉತ್ತಮ ಸ್ಪಂದನೆ ದೊರೆತಿದ್ದು, ರೂ. 74.00 ಕೋಟಿ ಮೊತ್ತದಲ್ಲಿ ಸುಮಾರು 44,000 ಫಲಾನುಭವಿಗಳು ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ. ಸುಮಾರು ರೂ. 61.00 ಕೋಟಿ ಸದಸ್ಯರಿಂದ ವಂತಿಗೆ ಸಂಗ್ರಹವಾಗಿದೆ.**

**2023–24ನೇ ಸಾಲಿನಲ್ಲೂ ಯಶಸ್ವಿನಿ ಯೋಜನೆಯನ್ನು ಮುಂದುವರೆಸಲು ಸರ್ಕಾರ ತೀರ್ಮಾನಿಸಿದೆ. 01/12/2023 ರಿಂದ ಸದಸ್ಯತ್ವ ನೋಂದಣಿ ಪ್ರಾರಂಭವಾಗಲಿದ್ದು, ಚಿಕಿತ್ಸಾ ಅವಧಿಯನ್ನು ಏಪ್ರಿಲ್ 2024 ರಿಂದ ಮಾರ್ಚ್ 2025 ರವರೆಗೆ ನಿಗದಿಗೊಳಿಸಲಾಗಿದೆ. ಈ ಸಾಲಿನಲ್ಲಿ ಯಶಸ್ವಿನಿ ಯೋಜನೆಯ ಮೂಲಕ ರಾಜ್ಯದಲ್ಲಿ ಸಹಕಾರಿಗಳ ಬಾಗಿಲಿಗೆ ಗುಣಮಟ್ಟದ ಆರೋಗ್ಯ ಸೌಲಭ್ಯ ತಲುಪಿಸುವ ಉದ್ದೇಶದಿಂದ ಯಶಸ್ವಿನಿ ಟ್ರಸ್ಟ್ ಕನಿಷ್ಠ 50.00 ಲಕ್ಷ ಸದಸ್ಯರನ್ನು ನೋಂದಾಯಿಸುವ ಗುರಿಯನ್ನು ಹಾಕಿಕೊಂಡಿದೆ.**

ರೈತರು ಭಾರತದ ಆರ್ಥಿಕತೆಯ ಬೆನ್ನೆಲುಬು. ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ರೈತರ, ಗ್ರಾಮೀಣ ಪ್ರದೇಶದ ಜನರ ಆರ್ಥಿಕ ಬಲವರ್ಧನೆಗೆ ಸಹಕಾರ ಚಳುವಳಿ ಕೈಗೊಂಡ ಕ್ರಮ, ಸಾಧಿಸಿದ ಪ್ರಗತಿ ಅವಿಸ್ಮರಣೀಯ. ಕರ್ನಾಟಕ ರಾಜ್ಯದಲ್ಲಿ ಸಹಕಾರ ಸಂಘಗಳ ಸದಸ್ಯರ ಆರೋಗ್ಯ ರಕ್ಷಣೆಗಾಗಿ ಸಹಕಾರ ಇಲಾಖೆ ಇಟ್ಟಿರುವ ಹೆಜ್ಜೆ, ಸಾಧಿಸಿರುವ ಪ್ರಗತಿ ಪ್ರಶಂಸಾರ್ಹ.

- 48.00 ಲಕ್ಷ ಸದಸ್ಯರ ನೋಂದಣಿ



- 13.30 ಲಕ್ಷ ಕುಟುಂಬಗಳು
- 2.48 ಲಕ್ಷ ಪುರುಷ ಸದಸ್ಯರು
- 2.33 ಲಕ್ಷ ಮಹಿಳಾ ಸದಸ್ಯರು
- ರೂ. 74.00 ಕೋಟಿ ಮೊತ್ತದಲ್ಲಿ 44 ಸಾವಿರ ಸಹಕಾರಿಗಳಿಗೆ ಚಿಕಿತ್ಸೆ

'ಎಲ್ಲರೂ ಒಬ್ಬನಿಗಾಗಿ, ಒಬ್ಬ ಎಲ್ಲರಿಗಾಗಿ' ಎಂಬ ಸಹಕಾರ ತತ್ವದ ಆಧಾರದಲ್ಲಿ ಪ್ರಾರಂಭಿಸಲಾದ 'ಯಶಸ್ವಿನಿ' ಆರೋಗ್ಯ ರಕ್ಷಣಾ ಯೋಜನೆಯು ನಗರ ಸಹಕಾರಿಗಳ, ಗ್ರಾಮೀಣ ಸಹಕಾರಿಗಳ ಮತ್ತು ಸ್ವ-ಸಹಾಯ ಗುಂಪುಗಳ ಸದಸ್ಯರ ಆರೋಗ್ಯ ಸಂಜೀವಿನಿಯಾಗಿ ಪರಿಣಮಿಸಿದೆ. 2022–23ರ ಸಾಲಿನಲ್ಲಿ ಮರುಜಾರಿಯಾದ ಯಶಸ್ವಿನಿ ಯೋಜನೆಯಡಿ, ಒಂಬತ್ತು ತಿಂಗಳ ಅವಧಿಯಲ್ಲಿ ಸುಮಾರು 44 ಸಾವಿರಕ್ಕೂ ಅಧಿಕ ಫಲಾನುಭವಿಗಳು ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ. ರಾಜ್ಯಾದ್ಯಂತ 2022–23ನೇ ಸಾಲಿನಲ್ಲಿ 13.30 ಲಕ್ಷ ಕುಟುಂಬಗಳ 48.00 ಲಕ್ಷ ಸದಸ್ಯರನ್ನು ನೋಂದಾಯಿಸುವ ಮೂಲಕ ಸಹಕಾರ ಇಲಾಖೆ ದಾಖಲೆಯ ಸಾಧನೆ ಮಾಡಿದೆ. ರಾಜ್ಯಾದ್ಯಂತ ನವೆಂಬರ್ 14 ರಿಂದ 20 ರವರೆಗೆ ಆಚರಿಸಲಾಗುತ್ತಿರುವ 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಈ ಸಂದರ್ಭದಲ್ಲಿ ಯಶಸ್ವಿನಿ ಯೋಜನೆಯ ಹಿನ್ನೆಲೆ, ಮಹತ್ವ ಹಾಗೂ ಸಹಕಾರ ಇಲಾಖೆಯ ಸಾಧನೆಗಳ ಬಗ್ಗೆ ಈ ಲೇಖನದಲ್ಲಿ ಬೆಳಕು ಚೆಲ್ಲಲಾಗಿದೆ.

**ಹಿನ್ನೆಲೆ :** ಗ್ರಾಮೀಣ ಜನರಿಗೆ ಆರೋಗ್ಯದ ಬಗ್ಗೆ ಸಾಕಷ್ಟು ಅರಿವು ಇಲ್ಲದ ಒಂದು ಕಾಲವಿತ್ತು. ರೈತರು ತಮ್ಮ ಆರೋಗ್ಯ ರಕ್ಷಣೆಗಾಗಿ ಅನ್ಯರ ಆಶ್ರಯ ಪಡೆಯಬೇಕಿತ್ತು. ಅಂತಹ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ ರೈತರ ಆರೋಗ್ಯ ರಕ್ಷಣೆಗಾಗಿ ವಿಶೇಷ ಯೋಜನೆಯೊಂದನ್ನು ರೂಪಿಸಲು ಸಂಕಲ್ಪಿಸಿದ್ದುದರ ಕ್ರಿಯಾರೂಪವೇ ಈ 'ಯಶಸ್ವಿನಿ' ಯೋಜನೆ.

ಯಶಸ್ವಿನಿ ಯೋಜನೆಯನ್ನು 2003ರಲ್ಲಿ ಸಹಕಾರ ಇಲಾಖೆಯ ಮೂಲಕ

ಜಾರಿಗೊಳಿಸಲಾಯಿತು. 2017–18ರವರೆಗೆ ಜಾರಿಯಲ್ಲಿದ್ದ ಈ ಯೋಜನೆ 2018 ರಿಂದ ಆರೋಗ್ಯ ಕರ್ನಾಟಕ ಯೋಜನೆಯೊಂದಿಗೆ ವಿಲೀನಗೊಂಡಿತು. ತದನಂತರ ಯಶಸ್ವಿನಿ ಯೋಜನೆಯ ಮರುಜಾರಿಗಾಗಿ ರಾಜ್ಯದೆಲ್ಲೆಡೆ ರೈತರ ಮತ್ತು ಸಹಕಾರಿಗಳಿಂದ ಬೇಡಿಕೆ ಬಂದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಯಶಸ್ವಿನಿ ಯೋಜನೆಯನ್ನು 1 ನವೆಂಬರ್ 2022 ರಿಂದ ಪುನಃ ಸಹಕಾರ ಇಲಾಖೆಯ ಆಶ್ರಯದಲ್ಲಿ ಮರುಜಾರಿ ಮಾಡಿತು. ಸಹಕಾರ ಸಂಘಗಳು ಮತ್ತು ಸ್ವ–ಸಹಾಯ ಗುಂಪುಗಳ ಸದಸ್ಯರಿಗೆ ಭಾರತದ ಯಾವುದೇ ರಾಜ್ಯಗಳು ಹೊಂದಿರದ ಆರೋಗ್ಯ ರಕ್ಷಣೆಯ ಗುರಿಯನ್ನು ಯಶಸ್ವಿನಿ ಯೋಜನೆ ಹೊಂದಿದೆ. ಸಹಕಾರ ಇಲಾಖೆ ಈ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದು ದಾಖಲೆ ನಿರ್ಮಿಸಿದೆ.

**ಯಶಸ್ವಿನಿ ಯೋಜನೆ :** ಕರ್ನಾಟಕ ರಾಜ್ಯದ ಗ್ರಾಮೀಣ ಮತ್ತು ನಗರ ಸಹಕಾರಿಗಳಿಗಾಗಿಯೇ ರೂಪಗೊಂಡಿರುವ ಒಂದು 'ಸ್ವಯಂ–ನಿಧಿ ಆರೋಗ್ಯ ಚಿಕಿತ್ಸಾ ಯೋಜನೆ' ಯೇ ಯಶಸ್ವಿನಿ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಾಗಿದೆ. ಈ ಯೋಜನೆಯಡಿ ಫಲಾನುಭವಿ ಕುಟುಂಬಕ್ಕೆ ವಾರ್ಷಿಕ ವೈದ್ಯಕೀಯ ಚಿಕಿತ್ಸಾ ವೆಚ್ಚದ ಗರಿಷ್ಠ ಮಿತಿ ರೂ. 5.00 ಲಕ್ಷಕ್ಕೆ ನಿಗದಿಪಡಿಸಲಾಗಿದೆ. ರಾಜ್ಯದ ಯಾವುದೇ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಯಲ್ಲಿ ನಗದು ರಹಿತ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಿಕೊಡಲಾಗಿದೆ.

- ಚಿಕಿತ್ಸಾ ವೆಚ್ಚದ ಗರಿಷ್ಠ ಮಿತಿ ರೂ. 5.00 ಲಕ್ಷ
- ಗರಿಷ್ಠ 4 ಜನರ ಗ್ರಾಮೀಣ ಸಹಕಾರಿ ಕುಟುಂಬಕ್ಕೆ ವಾರ್ಷಿಕ ರೂ.500 ವಂತಿಗೆ.
- ಗರಿಷ್ಠ 4 ಜನರ ನಗರ ಸಹಕಾರಿ ಕುಟುಂಬಕ್ಕೆ ವಾರ್ಷಿಕ ರೂ. 1000 ವಂತಿಗೆ.
- ರಾಜ್ಯದಲ್ಲಿ 613 ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳು.

ಯಶಸ್ವಿನಿ ಯೋಜನೆಯಡಿ ಸದಸ್ಯರಾಗಬಯಸುವ ಪ್ರತಿಯೊಬ್ಬರೂ ವರ್ಷಕ್ಕೆ ನಿಗದಿತ ಪ್ರಮಾಣದ ವಂತಿಗೆ ಹಣ ಪಾವತಿಸಬೇಕಾಗುತ್ತದೆ. ಗ್ರಾಮೀಣ ಪ್ರದೇಶದ ಸಹಕಾರಿ ಸಂಘಗಳ ಮತ್ತು ಸ್ವ–ಸಹಾಯ ಗುಂಪುಗಳ ಗರಿಷ್ಠ ನಾಲ್ಕು ಜನರ ಕುಟುಂಬಕ್ಕೆ ತಲಾ ವಾರ್ಷಿಕ ರೂ. 500 ವಂತಿಗೆ ಹಾಗೂ ನಾಲ್ಕಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಶೇ. 20% ಹೆಚ್ಚುವರಿಯಾಗಿ ಅಂದರೆ ಪ್ರತಿ ಹೆಚ್ಚುವರಿ ಸದಸ್ಯರಿಗೆ ರೂ. 100 ಗಳನ್ನು ಪಾವತಿಸಬೇಕಾಗುತ್ತದೆ. ಅದೇ ರೀತಿ ನಗರ ಪ್ರದೇಶದ ಸಹಕಾರ ಸಂಘಗಳ ಗರಿಷ್ಠ ನಾಲ್ಕು ಮಂದಿ ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ ರೂ. 1000 ವಂತಿಗೆ ನಿಗದಿ ಪಡಿಸಲಾಗಿದೆ. ನಾಲ್ಕು ಮಂದಿಗಿಂತ ಹೆಚ್ಚಿನ ಸದಸ್ಯರು ಇರುವ ಕುಟುಂಬಗಳಿಗೆ ಹೆಚ್ಚುವರಿ ಸದಸ್ಯರಿಗೆ ತಲಾ ರೂ. 200 ಗಳ ವಂತಿಗೆ ಪಾವತಿಸಿ ನೋಂದಾಯಿಸಬಹುದಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರಿಗೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿ ಸಹಾಯಧನ ನೀಡುವ ಮೂಲಕ ಅವರ ವಾರ್ಷಿಕ ಸದಸ್ಯತ್ವದ ವಂತಿಗೆಯನ್ನು ಸರ್ಕಾರವೇ ಭರಿಸುತ್ತದೆ. ಸಹಕಾರಿ ಮೀನುಗಾರರು, ಸಹಕಾರಿ ಬೀಡಿ ಕಾರ್ಮಿಕರು ಮತ್ತು ಸಹಕಾರಿ ನೇಕಾರರು ಕೂಡ ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ. 2023–24ನೇ ಸಾಲಿನಲ್ಲೂ ಯಶಸ್ವಿನಿ ಯೋಜನೆಯನ್ನು ಮುಂದುವರೆಸಲು ಸರ್ಕಾರ ತೀರ್ಮಾನಿಸಿದೆ. 01/12/2023 ರಿಂದ ಸದಸ್ಯತ್ವ ನೋಂದಣಿ ಪ್ರಾರಂಭವಾಗಲಿದ್ದು, ಚಿಕಿತ್ಸಾ ಅವಧಿಯನ್ನು ಏಪ್ರಿಲ್ 2024 ರಿಂದ ಮಾರ್ಚ್ 2025 ರವರೆಗೆ ನಿಗದಿಗೊಳಿಸಲಾಗಿದೆ. ಈ ಸಾಲಿನಲ್ಲಿ ಯಶಸ್ವಿನಿ ಯೋಜನೆಯ ಮೂಲಕ ರಾಜ್ಯದಲ್ಲಿ ಸಹಕಾರಿಗಳ ಬಾಗಿಲಿಗೆ ಗುಣಮಟ್ಟದ ಆರೋಗ್ಯ ಸೌಲಭ್ಯ ತಲುಪಿಸುವ ಉದ್ದೇಶದಿಂದ ಯಶಸ್ವಿನಿ ಟ್ರಸ್ಟ್ ಕನಿಷ್ಠ 50.00 ಲಕ್ಷ ಸದಸ್ಯರನ್ನು ನೋಂದಾಯಿಸುವ ಗುರಿಯನ್ನು ಹಾಕಿಕೊಂಡಿದೆ. ಈ ಸಾಲಿನಲ್ಲಿ ಹೊಸದಾಗಿ, ಕಾರ್ಯನಿರತ ಸಹಕಾರ ಸಂಘಗಳ ಹಾಗೂ ಬ್ಯಾಂಕುಗಳಲ್ಲಿ ಕನಿಷ್ಠ ಮೂರು ವರ್ಷ ಸೇವೆ ಪೂರ್ಣಗೊಳಿಸಿ ಮಾಸಿಕ ಒಟ್ಟು ವೇತನ ರೂ. 30 ಸಾವಿರ ಅಥವಾ ಅದಕ್ಕಿಂತ ಕಡಿಮೆ ವೇತನ ಪಡೆಯುತ್ತಿರುವ ನೌಕರರು ಮತ್ತು ಅವರ ಅರ್ಹ ಕುಟುಂಬದ ಸದಸ್ಯರು ಯಶಸ್ವಿನಿ ಯೋಜನೆಯಡಿ ಸದಸ್ಯರಾಗಲು ಮತ್ತು ಸೌಲಭ್ಯ ಪಡೆಯಲು ಸರ್ಕಾರವು ಅವಕಾಶ ಕಲ್ಪಿಸಿದೆ. ಜೊತೆಗೆ ಅವಿಭಕ್ತ ಕುಟುಂಬಗಳಿಗೂ ಯೋಜನೆಯ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಿಕೊಡಲಾಗಿದೆ.

ಯಶಸ್ವಿನಿ ಯೋಜನೆಯಡಿಯಲ್ಲಿ ಮುಖ್ಯವಾಗಿ ಹೃದಯಕ್ಕೆ ಸಂಬಂಧಿಸಿದ ರೋಗಗಳು, ಕಿವಿ, ಮೂಗು, ಗಂಟಲು ವ್ಯಾದಿಗಳು, ಕರುಳಿನ ಖಾಯಿಲೆಗಳು, ನರಗಳಿಗೆ ಸಂಬಂಧಿಸಿದ ಖಾಯಿಲೆಗಳು, ಕಣ್ಣಿನ ಖಾಯಿಲೆಗಳು, ಮೂಳೆ ರೋಗಗಳು, ಸ್ತ್ರೀಯರಿಗೆ ಸಂಬಂಧಿಸಿದ ಖಾಯಿಲೆಗಳು ಸೇರಿದಂತೆ ಇತರೆ ಅನುಸೂಚಿತ ಸಾಮಾನ್ಯ ರೋಗಗಳಿಗೆ ಸಂಬಂಧಿಸಿದ ಚಿಕಿತ್ಸಾ ಸೌಲಭ್ಯಗಳನ್ನು ಪಡೆಯಬಹುದಾಗಿದೆ.

ರಾಜ್ಯದ ಸುಮಾರು 613 ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಅಳವಡಿಸಿಕೊಂಡಿರುವ 1650 ಚಿಕಿತ್ಸೆಗಳು ಮತ್ತು 478 ಐಸಿಯು ಚಿಕಿತ್ಸೆಗಳು ಸೇರಿ ಒಟ್ಟು 2128 ನಿಗದಿತ ಚಿಕಿತ್ಸೆಗಳನ್ನು ನಗದು ರಹಿತವಾಗಿ ಪಡೆಯಲು ಅವಕಾಶ ಯಶಸ್ವಿನಿ ಯೋಜನೆಯಲ್ಲಿದೆ.

**ನಿರೀಕ್ಷೆ ಮೀರಿ ಸಾಧನೆ :** ಸಹಕಾರ ಇಲಾಖೆ ಯಶಸ್ವಿನಿ ಯೋಜನೆಯನ್ನು ಅತ್ಯಲ್ಪ ಅವಧಿಯಲ್ಲೇ ರಾಜ್ಯದಾದ್ಯಂತ ಪರಿಣಾಮಕಾರಿಯಾಗಿ ಜಾರಿಗೊಳಿಸಿದೆ. ಯಶಸ್ವಿನಿ ಯೋಜನೆಯ ಮೂಲಕ ರಾಜ್ಯದಲ್ಲಿ ಸಹಕಾರಿಗಳ ಬಾಗಿಲಿಗೆ ಗುಣಮಟ್ಟದ ಆರೋಗ್ಯ ಸೌಲಭ್ಯ ತಲುಪಿಸುವ ಉದ್ದೇಶದಿಂದ ಯಶಸ್ವಿನಿ ಟ್ರಸ್ಟ್ 30.00 ಲಕ್ಷ ಸದಸ್ಯರನ್ನು ನೋಂದಾಯಿಸುವ ಗುರಿಯನ್ನು ಹಾಕಿಕೊಳ್ಳಲಾಗಿತ್ತು. ಇದಕ್ಕೆ ಎದುರಾಗಿ ಸುಮಾರು 13.30 ಲಕ್ಷ ಕುಟುಂಬಗಳ 48.00 ಲಕ್ಷ ಸದಸ್ಯರನ್ನು ನೋಂದಾಯಿಸಿ ನಿರೀಕ್ಷೆ ಮೀರಿ ಸಾಧನೆ ಮಾಡಿದೆ.

| ಕ್ರ.ಸಂ. | ಅತಿ ಹೆಚ್ಚು ನೋಂದಣಿಯಾದ ಜಿಲ್ಲೆಗಳು | |
|---|---|---|
| | ಜಿಲ್ಲೆ | ಸದಸ್ಯತ್ವ ನೋಂದಣಿ (ಲಕ್ಷಗಳಲ್ಲಿ) |
| 1. | ಮೈಸೂರು | 3.41 |
| 2. | ಮಂಡ್ಯ | 3.26 |
| 3. | ಉಡುಪಿ | 3.22 |
| 4. | ತುಮಕೂರು | 3.01 |
| 5. | ದಕ್ಷಿಣ ಕನ್ನಡ | 2.58 |
| 6. | ಬೆಳಗಾವಿ | 2.57 |
| 7. | ಶಿವಮೊಗ್ಗ | 2.35 |
| 8. | ಬಾಗಲಕೋಟ | 2.04 |
| 9. | ಹಾಸನ | 1.94 |
| 10. | ಉತ್ತರ ಕನ್ನಡ | 1.83 |

ಫಲಾನುಭವಿಗಳನ್ನು ನೋಂದಾಯಿಸುವ ಮತ್ತು ವಂತಿಗೆಯನ್ನು ಸಂಗ್ರಹಿಸುವ ಕಾರ್ಯದಲ್ಲಿ ಸಹಕಾರ ಇಲಾಖೆಯ ಅಧಿಕಾರಿಗಳ ಅವಿರತ ಶ್ರಮವಿದೆ. ಇಲಾಖೆಯ ಜೊತೆಗೆ ರಾಜ್ಯದ ಹಾಲು ಒಕ್ಕೂಟಗಳು, ವಿವಿಧ ಸಹಕಾರ ಸಂಘ ಸಂಸ್ಥೆಗಳು ಕೈಜೋಡಿಸಿ ಯೋಜನೆಯ ಯಶಸ್ಸಿಗೆ ಸಾಕ್ಷಿಯಾಗಿವೆ.

| ವಿಭಾಗವಾರು ನೋಂದಣಿ ವಿವರ | | |
|---|---|---|
| ಕ್ರ.ಸಂ | ವಿಭಾಗ | ಸಾಧನೆ |
| 1. | ಮೈಸೂರು | 17,63,617 |
| 2. | ಬೆಂಗಳೂರು | 14,84,291 |
| 3. | ಬೆಳಗಾವಿ | 10,10,503 |
| 4. | ಕಲಬುರಗಿ | 5,66,258 |
| | ಒಟ್ಟು | 48,24,699 |

ರಾಜ್ಯದಾದ್ಯಂತ ನಾಲ್ಕು ವಿಭಾಗಗಳಲ್ಲಿ ಯಶಸ್ವಿನಿ ಸದಸ್ಯತ್ವ ನೋಂದಣಿಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಮೈಸೂರು ಮತ್ತು ಬೆಂಗಳೂರು ವಿಭಾಗಗಳು ಅತಿ ಹೆಚ್ಚು ಪ್ರಗತಿಯನ್ನು ಸಾಧಿಸಿವೆ. ಜಿಲ್ಲಾವಾರು ಸದಸ್ಯತ್ವ ನೋಂದಣಿಯಲ್ಲಿ ಮೈಸೂರು, ಮಂಡ್ಯ, ಉಡುಪಿ, ತುಮಕೂರು, ದಕ್ಷಿಣ ಕನ್ನಡ, ಬೆಳಗಾವಿ, ಶಿವಮೊಗ್ಗ, ಬಾಗಲಕೋಟ, ಹಾಸನ, ಉತ್ತರ ಕನ್ನಡ ಜಿಲ್ಲೆಗಳು ಅತಿ ಹೆಚ್ಚು ಪ್ರಗತಿ ಸಾಧಿಸಿವೆ. ಸಹಕಾರಿಗಳ ಆರೋಗ್ಯದ ಆಶಾಕಿರಣ ಎನಿಸಿರುವ 'ಯಶಸ್ವಿನಿ' ಆರೋಗ್ಯ ರಕ್ಷಣಾ ಯೋಜನೆಯಿಂದ ರೈತರ, ಸಹಕಾರಿಗಳ ಮುಖದಲ್ಲಿ ಸಂತಸದ ಮಂದಹಾಸ ಮೂಡಿಬಂದಿದೆ. ಯಶಸ್ವಿನಿಯ ಯಶಸ್ಸು ಎಲ್ಲರಿಗೂ ಮಾದರಿಯಾಗಿದೆ.

## ಆರೋಗ್ಯದ ಬಗ್ಗೆ ಸಹಕಾರಿಗಳಲ್ಲಿ ಆತ್ಮವಿಶ್ವಾಸ ತುಂಬಿದ ಯಶಸ್ವಿನಿ ಯೋಜನೆ

ಮಾನ್ಯ ಸಹಕಾರ ಸಚಿವರ ಮಾರ್ಗದರ್ಶನ ಮತ್ತು ಪ್ರೋತ್ಸಾಹ, ಸಹಕಾರ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ಸಹಕಾರ ಸಂಘಗಳ ನಿಬಂಧಕರ ನಿರಂತರ ಸಲಹೆ, ಮಾರ್ಗದರ್ಶನಗಳು ಯಶಸ್ವಿನಿ ಯೋಜನೆಯ ಇಂದಿನ ಯಶಸ್ಸಿಗೆ ಕಾರಣವಾಗಿದೆ.

ಯಶಸ್ವಿನಿ ಯೋಜನೆ ಪುನರಾರಂಭಗೊಂಡ ನಂತರ ಸಹಕಾರ ಸಂಘಗಳ ಜಂಟಿ ನಿಬಂಧಕರು, ಉಪನಿಬಂಧಕರು, ಸಹಾಯಕ ನಿಬಂಧಕರು, ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರುಗಳು, ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಸಿಬ್ಬಂದಿಗಳ ಸಹಕಾರದಿಂದ ರಾಜ್ಯದಾದ್ಯಂತ 13.30 ಲಕ್ಷ ಕುಟುಂಬಗಳ 48.00 ಲಕ್ಷ ಸದಸ್ಯರನ್ನು ನೋಂದಾಯಿಸುವ ಮೂಲಕ ಸಹಕಾರ ಇಲಾಖೆ ದಾಖಲೆಯ ಸಾಧನೆ ಮಾಡಿದೆ. ಈ ವರ್ಷವೂ ಯೋಜನೆಯನ್ನು ಮುಂದುವರಿಸಲು ಸರ್ಕಾರ ತೀರ್ಮಾನಿಸಿದ್ದು, ಸದಸ್ಯರ ನೋಂದಣಿಯನ್ನು ಡಿಸೆಂಬರ್ 2023ರಲ್ಲಿ ಪ್ರಾರಂಭಿಸಲಾಗುತ್ತದೆ. ಈ ವರ್ಷ 50 ಲಕ್ಷ ಸದಸ್ಯರನ್ನು ನೋಂದಣಿ ಮಾಡುವ ಗುರಿ ಹಾಕಿಕೊಳ್ಳಲಾಗಿದ್ದು, ಗುರಿ ಮೀರಿ ಸಾಧನೆ ಮಾಡುವ ನಿರೀಕ್ಷೆ ಇರಿಸಿಕೊಳ್ಳಲಾಗಿದೆ.



ಯಶಸ್ವಿನಿ ಯೋಜನೆಯ ಮೂಲಕ ಸಹಕಾರಿಗಳು ಆರೋಗ್ಯದ ಯಾವುದೇ ರೀತಿಯ ಸಮಸ್ಯೆಯನ್ನು ಆತ್ಮ ವಿಶ್ವಾಸದಿಂದ ಎದುರಿಸಬಹುದಾಗಿದೆ. ಸಹಕಾರಿಗಳ ಆರೋಗ್ಯ ರಕ್ಷಣೆಗಾಗಿ ಸಹಕಾರ ಇಲಾಖೆ ಪ್ರಮಾಣಿಕ ಪ್ರಯತ್ನ ಮಾಡಲಾಗುತ್ತಿದ್ದು, ಇಲ್ಲಿಯವರೆಗೆ 44 ಸಾವಿರ ಸಹಕಾರಿಗಳಿಗೆ ರೂ. 74.00 ಕೋಟಿ ಮೊತ್ತದಷ್ಟು ಚಿಕಿತ್ಸೆಗಳನ್ನು ಒದಗಿಸಲಾಗಿದೆ. ಯಶಸ್ವಿನಿ ಯೋಜನೆಯ ಮೂಲಕ ರಾಜ್ಯದ ಸಹಕಾರಿಗಳಿಗೆ ಗುಣಮಟ್ಟದ ಆರೋಗ್ಯ ಸೌಲಭ್ಯ ಉಚಿತವಾಗಿ ಒದಗಿಸುವ ಉದ್ದೇಶ ನಿರಂತರವಾಗಿ ನಡೆಯಲಿದೆ.

**– ಎಂ. ವೆಂಕಟಸ್ವಾಮಿ, ಮುಖ್ಯಕಾರ್ಯನಿರ್ವಹಣಾಧಿಕಾರಿ**
**ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್, ಬೆಂಗಳೂರು**

# ಸಹಕಾರ ಚಳವಳಿ – ಮಾಹಿತಿ ತಂತ್ರಜ್ಞಾನ ಅಳವಡಿಕೆ ಅನಿವಾರ್ಯ



ಶಶಿಧರ ಎಲೆ
ಸಹಕಾರ ಸಂಘಗಳ ಅಪರ ನಿಬಂಧಕರು
(ನಿವೃತ್ತ), ಬೆಂಗಳೂರು

**ಧಾನ್ಯ, ಬೇಳೆಕಾಳು, ಎಣ್ಣೆ ಕಾಳು, ವಾಣಿಜ್ಯ ಬೆಳೆಗಳಾದ ಅಡಕೆ, ರಬ್ಬರ್ ಈ ಸಹಕಾರ ಸಂಘಗಳು ಕೂಡ ಮಾಹಿತಿ ತಂತ್ರಜ್ಞಾನ ಸೌಲಭ್ಯಗಳನ್ನು ಪಡೆಯಲು ಕಂಪ್ಯೂಟರೀಕರಣಗೊಳ್ಳಲೇಬೇಕು. ಮಾರುಕಟ್ಟೆ ಮಾಹಿತಿಗಳು ಅಂತರ್ಜಾಲದಿಂದ ಲಭ್ಯವಿದ್ದು ಉತ್ಪಾದಕರಿಗೆ ಉತ್ತಮ ನ್ಯಾಯಯುತ ದರ ದೊರೆಕಿಸಿಕೊಡಲು ಸಾಧ್ಯವಾಗುತ್ತದೆ. ಸಂಸ್ಕರಣೆ (ಮೌಲ್ಯವರ್ಧನೆ) ಮಾಡಿ ಮಾರಾಟ ಮಾಡುವಲ್ಲಿ ಇದು ಸಹಕಾರಿ. ಪ್ಯಾಕೇಜಿಂಗ್, ಸಂಗ್ರಹಣೆ, 'ಸಾಗಾಣಿ, ಚಿಲ್ಲರೆ ಮಾರಾಟ, ಚಿಲ್ಲರೆ ಮಾರಾಟ ಏಜೆನ್ಸಿಗಳೊಡನೆ ವ್ಯವಹಾರ ಎಲ್ಲಕ್ಕೂ ಮಾಹಿತಿ ತಂತ್ರಜ್ಞಾನದ ಅಳವಡಿಕೆ ಅತಿ ಅವಶ್ಯ. ಆನ್‌ಲೈನ್ ಮಾರಾಟಕ್ಕೂ ವಿವಿಧ 'ಪ್ಲಾಟ್ ಫಾರಂ' ಗಳನ್ನು (ಅಮೇಜಾನ್, ಫ್ಲಿಪ್ ಕಾರ್ಟ್, ಬಿಗ್ ಬಾಸ್ಕೆಟ್, ಇತರೆ) ಉಪಯೋಗಿಸಿಕೊಳ್ಳಲೇಬೇಕು. ಆಗ ಮಾತ್ರ ಈಗ ಖರೀದಿ ಶಕ್ತಿ ಉಳ್ಳ ಯುವ ಜನತೆಯನ್ನು ಮುಟ್ಟಬಹುದಾಗಿದೆ. ಆಗ ಮಾತ್ರ ಈ ಸಹಕಾರ ಕ್ಷೇತ್ರ ಉಳಿಯಬಹುದಾಗಿದೆ.**



ವಿಶ್ವದ ಚರಿತ್ರೆಯ ನಾಗರಿಕತೆಯ ಬೆಳವಣಿಗೆಯಲ್ಲಿ ನಾವು ಶಿಲಾಯುಗ, ಕಂಚಿನಯುಗ, ಕಬ್ಬಿಣ ಯುಗ ಎಂಬ ಹಂತಗಳನ್ನು ಗುರುತಿಸುತ್ತೇವೆ. ಈಗಿನ ಯುಗ ಜ್ಞಾನದ ಯುಗ, ವೇಗದ ಯುಗ, ಮತ್ತು ಮಾಹಿತಿ ತಂತ್ರಜ್ಞಾನದ ಯುಗ. ಮಾಹಿತಿ ತಂತ್ರಜ್ಞಾನ ಅಳವಡಿಕೆ ಇಲ್ಲದೇ ಇದ್ದಲ್ಲಿ ಆ ಕ್ಷೇತ್ರ ಅಥವಾ ವಲಯದ ಅಸ್ತಿತ್ವವೇ ಇಲ್ಲದ ಕಾಲಘಟ್ಟದಲ್ಲಿ ನಾವಿದ್ದೇವೆ. ಇದಕ್ಕೆ 'ಸಹಕಾರ ಚಳವಳಿ'ಯೂ ಹೊರತಾಗಿಲ್ಲ. ಸಾಮಾಜಿಕ ನ್ಯಾಯದೊಡನೆ ಆರ್ಥಿಕ ಬೆಳವಣಿಗೆಗೆ ಕಾರಣವಾದ ಈ ಚಳವಳಿ ಅಸ್ತಿತ್ವ ಕಳೆದುಕೊಂಡಲ್ಲಿ ಅಸಮಾನತೆಯ ಸಮಾಜ ನಿರ್ಮಾಣಕ್ಕೆ ಕಾರಣವಾಗುತ್ತದೆ. ಸಮಾನತೆಯ ಸಮಾಜ ನಿರ್ಮಾಣವೇ 'ಪ್ರಜಾಪ್ರಭುತ್ವ' ರಾಷ್ಟ್ರದ 'ಸಂವಿಧಾನ'ದ ಧ್ಯೇಯವಾಗಿರುತ್ತದೆ. ಈ ದಿಸೆಯಲ್ಲಿ ಸಹಕಾರ ಚಳವಳಿಯು ಎಷ್ಟರ ಮಟ್ಟಿಗೆ ಮಾಹಿತಿ ತಂತ್ರಜ್ಞಾನಕ್ಕೆ ಪ್ರಾಧಾನ್ಯತೆ ನೀಡಿದೆ. ಅದನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿದೆ. ಅದರ ಪ್ರಯೋಜನ ಪಡೆದು ಚಳವಳಿಯ ಬೆಳವಣಿಗೆಗೆ ಕಾರಣವಾಗಿರುತ್ತದೆ ಎಂಬುದರ ಪರಮಾರ್ಶೆ ಇಂದಿನ ಅಗತ್ಯವಾಗಿದೆ.

ಇದು ಸ್ಪರ್ಧಾತ್ಮಕ ಯುಗ ಕೂಡ ಆಗಿರುತ್ತದೆ. ಸ್ಪರ್ಧೆಯಲ್ಲಿ ಯಶಸ್ವಿಯಾದವರು ಮಾತ್ರ ಉಳಿಯುತ್ತಾರೆ. ಇತರರು ಅಳಿಯುತ್ತಾರೆ. ಸ್ಪರ್ಧೆಯಲ್ಲಿ ಗೆಲ್ಲುವವರು ಇಂದಿನ ಅವಶ್ಯಕತೆಯಾದ ಮಾಹಿತಿ ತಂತ್ರಜ್ಞಾನದ ಅವಶ್ಯಕತೆ ಅದರ ಉಪಯುಕ್ತತೆ ಅರಿತವರಾಗಿರುತ್ತಾರೆ. ಆದುದರಿಂದ ಅದನ್ನು ಅಳವಡಿಸಿಕೊಂಡು ತಮ್ಮ ವ್ಯವಹಾರವನ್ನು ನಡೆಸುತ್ತಿರುತ್ತಾರೆ. ಆದ್ದರಿಂದ, ಅವರು ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ. ಈ ದಿನಮಾನಗಳಲ್ಲಿ ಕೃತಕ ಬುದ್ಧಿಮತ್ತೆ **(Artificial Intelligence -AI)** ಉಪಯೋಗಿಸಿಕೊಂಡು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆ ಮಾಡಲು ಜಾಹಿರಾತು ಮತ್ತು ಇತರೆ ಸಾಮಾಜಿಕ ಮಾಧ್ಯಮಗಳ ಮೂಲಕ ಗ್ರಾಹಕರನ್ನು ಆಕರ್ಷಿಸಲಾಗುತ್ತಿದೆ ಮತ್ತು ನೂತನ ಮಾರುಕಟ್ಟೆಯನ್ನು ಈ 'ಕೊಳ್ಳು ಬಾಕು' ಸಂಸ್ಕೃತಿಯಲ್ಲಿ ಹುಟ್ಟುಹಾಕಲಾಗುತ್ತಿದೆ. ಈ ಸ್ಪರ್ಧಾ ಯುಗದಲ್ಲಿ ಸಹಕಾರ ಚಳವಳಿಯು ಈ 'ಅನುಕೂಲತೆ' 'ಕುಶಲತೆ'ಯನ್ನು ಉಪಯೋಗಿಸಿಕೊಳ್ಳದಿದ್ದಲ್ಲಿ 'ಸಹಕಾರ ಚಳವಳಿ' ಹಿಂದೆ ಉಳಿಯುತ್ತದೆ. ಇದರಿಂದ ಆಗುವ ನಷ್ಟ ಸಮಾಜಕ್ಕೆ ಭರಿಸಲು ಇತರರಿಂದ ಸಾಧ್ಯವಿಲ್ಲ.

**ಪತ್ತು ಮತ್ತು ಬ್ಯಾಂಕಿಂಗ್ ವಲಯ :** ಭಾರತದಲ್ಲಿ 'ಪತ್ತು' ಮತ್ತು 'ಸಹಕಾರ' ಒಂದೇ ನಾಣ್ಯದ ಎರಡು ಮುಖಗಳು ಎಂಬಂತೆ ಸಹಕಾರ ಚಳವಳಿ ಬೆಳೆದು ಬಂದಿರುವುದನ್ನು ನಾವು

**ಗ್ರಾಮೀಣ ಜನತೆಗೆ ಎಟುಕುವ, ಕೃಷಿ ಅಗತ್ಯತೆಗೆ ಅಗತ್ಯ ದುಡಿಯುವ ಬಂಡವಾಳ ಒದಗಿಸುವ, ಅದರಲ್ಲಿಯೂ ಸಣ್ಣ ಮತ್ತು ಅತಿ ಸಣ್ಣ ರೈತರ ಅಗತ್ಯತೆ ಪೂರೈಸುವ ಈ ಸಹಕಾರ ಸಂಘಗಳು ಕೂಡ ಮಾಹಿತಿ ತಂತ್ರಜ್ಞಾನ ಉಪಯೋಗಿಸುವಲ್ಲಿ ಹಿಂದೆ ಬೀಳುವಂತಿಲ್ಲ. ಈಗಾಗಲೇ ಕಡ್ಡಾಯವಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿ.ಡಿ.ಎಸ್.) ಪಡಿತರ ವಿತರಣೆಗೆ, ಬೆಳೆಸಾಲ ವಿತರಣೆಯಲ್ಲಿ 'ಫ್ರೂಟ್ಸ್' ತಂತ್ರಾಂಶ ಬಳಕೆ ಮಾಡಬೇಕಾಗಿದೆ. ಲೆಕ್ಕಗಳನ್ನು 'ಸಾಮಾನ್ಯ ಲೆಕ್ಕ ಪದ್ಧತಿ' ಅನುಸರಿಸಬೇಕಾಗಿದೆ. ಇದಕ್ಕೆ ನಬಾರ್ಡ್ ತಂತ್ರಾಂಶ ರಚಿಸಿ ನೀಡಿದೆ. ಸಂಘಗಳಲ್ಲಿ ಜಿ.ಕೇ.ಸ. ಬ್ಯಾಂಕಿನ ಶಾಖೆಯೊಡನೆ ಜೊಡಣೆಯಾಗಿ, 'ಮೈಕ್ರೊ ಎ.ಟಿ.ಎಂ.' ಗಳ ಸ್ಥಾಪನೆಯಾಗಿದೆ. ಎಲ್ಲ ಸಹಕಾರ ಸಂಘಗಳು ಈ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲೇ ಬೇಕಾಗಿದೆ. ಆಗ ಮಾತ್ರ ಅಲ್ಪಾವಧಿ ಕೃಷಿ ಪತ್ತಿನ ರಚನೆಯ ಬುನಾದಿಯಾದ ಈ ಸಂಘಗಳು ಉಳಿದು ಹೆಚ್ಚಿನ ಕೊಡುಗೆ ನೀಡಬಲ್ಲವು.**

ಕಂಡಿದ್ದೇವೆ. 1960–70ರ ದಶಕದವರೆಗೆ ಈ ವಲಯ ಬಹಳಷ್ಟು 'ಸಹಕಾರ' ಏಕಸ್ವಾಮ್ಯತೆಯನ್ನು ಪಡೆದಿತ್ತು ಎಂದರೆ ತಪ್ಪಾಗಲಾರದು. ಆದರೆ, ಈ ವಲಯದಲ್ಲಿ ನಮ್ಮ ಪಾಲು ಎಷ್ಟಿದೆ? ನಗಣ್ಯವೇ ಎಂಬ ಹಂತಕ್ಕೆ ತಲುಪಿದ್ದೇವೆ. (ಶೇ.44–1990–91 ಶೇ.16 2020–21) ಮೊತ್ತದಲ್ಲಿ ಏರಿಕೆಯಾಗಿದ್ದರೂ, ಸಂಖ್ಯೆಯಲ್ಲಿ ಏರಿಕೆಯಾಗಿದ್ದರೂ ವಾಣಿಜ್ಯ, ಖಾಸಗಿ, ಗ್ರಾಮೀಣ ಬ್ಯಾಂಕುಗಳ ಪಾಲು ಹೆಚ್ಚಿಗೆಯಾಗುತ್ತಿದ್ದು 'ಸಹಕಾರ ವಲಯ' ಸ್ಪರ್ಧೆಯಲ್ಲಿ ಹಿಂದಿದೆ ಎಂಬುದು ಕಟು ವಾಸ್ತವ. ಇದಕ್ಕೆ ಹಲವಾರು ಕಾರಣಗಳಿದ್ದರೂ ಅದರಲ್ಲಿ 'ಮಾಹಿತಿ ತಂತ್ರಜ್ಞಾನ'ದ ಅಳವಡಿಕೆ, 'ಕಂಪ್ಯೂಟರೀಕರಣ' 'ಗಣಕ ಯಂತ್ರ' ಅಳವಡಿಕೆಯಲ್ಲಿ ಹಿಂಜರಿಕೆಯೂ ಒಂದು ಕಾರಣವಾಗಿದೆ.

'ಬ್ಯಾಂಕಿಂಗ್' ಎಂದರೆ ಸಾಲ (ಪತ್ತು) ನೀಡುವ ಮತ್ತು ಹೂಡಿಕೆ ಮಾಡುವ ಉದ್ದೇಶಕ್ಕಾಗಿ 'ಸಾರ್ವಜನಿಕರಿಂದ ಠೇವಣಿ ಸಂಗ್ರಹಣೆ', ಬೇಡಿಕೆಯಂತೆ ಹಣ ಹಿಂತಿರುಗಿ ಪಡೆಯುವ ಮತ್ತು ಚೆಕ್, ಡಿ.ಡಿ. ಅಥವಾ ಇತರೆ ಉಪಕರಣ (instrument) ಮೂಲಕ ಅಥವಾ ಇನ್ನಾವುದೇ ತರಹೆಯಲ್ಲಿ ಹಣ ಹಿಂದಿರುಗಿಸಲು ಅಥವಾ ವರ್ಗಾಯಿಸಲು ಸಾಧ್ಯವಾಗುವುದು. ಆದರೆ, ಸಹಕಾರ ಸಂಘಗಳಲ್ಲಿ ಈ ವ್ಯವಹಾರವು 'ಸದಸ್ಯ' ರೊಡನೆ ಮಾತ್ರ ಸಾಧ್ಯ. ಈ ಚಟುವಟಿಕೆಯಲ್ಲಿ ವ್ಯವಸ್ಥಾಪನೆ, ಲೆಕ್ಕ ನಿರ್ವಹಣೆ, ಠೇವಣಿ ಸಂಗ್ರಹಣೆ, ಸಾಲ ನೀಡಿಕೆ, ಸಾಲ ವಸೂಲಿ ಎಲ್ಲ ಕಾರ್ಯಗಳಲ್ಲಿಯೂ ಮಾಹಿತಿ ತಂತ್ರಜ್ಞಾನ ಅವಿಭಾಜ್ಯ ಅಂಗವಾಗಿರುತ್ತದೆ. ಆರಂಭದಲ್ಲಿ ಘಟಕವಾರು ಕಂಪ್ಯೂಟರೀಕರಣ ಈಗ 'ಕೋರ್ ಬ್ಯಾಂಕಿಂಗ್,' ಹಂತ ತಲುಪಿ ಒಬ್ಬ ಗ್ರಾಹಕ 'ಎಲ್ಲಿಯಾದರೂ, ಯಾವಾಗಲಾದರೂ' ಬ್ಯಾಂಕಿಂಗ್ ವ್ಯವಹಾರ ನಡೆಸಲು ಸಶಕ್ತತೆಯನ್ನು ಪಡೆದಿರುತ್ತಾನೆ. ತನ್ನ ಮೊಬೈಲ್ (ಚರ ದೂರವಾಣಿ ಸಾಧನ)ನಲ್ಲಿ ತನ್ನ ಖಾತೆ ವೀಕ್ಷಿಸುವ, ಹಣ ವರ್ಗಾಯಿಸುವ, ಹಣ ಜಮಾ ಮಾಡುವ, ನಗದು ಎ.ಟಿ.ಎಂ. ನಿಂದ ಪಡೆಯುವ ಸಾಲಕ್ಕೆ ಅರ್ಜಿ ಸಲ್ಲಿಸಲು, ಸಾಲ ಪಡೆದು ಹಣ ಡ್ರಾ ಮಾಡಲು ಸಾಧ್ಯವಾಗಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ಷಣ ಮಾತ್ರದಲ್ಲಿ ಹಣ ವರ್ಗಾವಣೆ ಸಾಧ್ಯವಾಗಿದೆ. ಆದ್ದರಿಂದ ಖರೀದಿ ಶಕ್ತಿ ಹೆಚ್ಚುತ್ತಿದೆ.

'ಡಿಜಿಟಲ್' ವ್ಯವಹಾರಗಳಿಗೆ ಉತ್ತೇಜನ ನೀಡಲಾಗುತ್ತಿದೆ. ನಗದು ವ್ಯವಹಾರಗಳ ಮೇಲೆ 'ವೆಚ್ಚ' ವಿಧಿಸಲಾಗುತ್ತಿದೆ. ಆಟೋ ಚಾಲಕರು, ಸಣ್ಣ, ಸಣ್ಣ ವ್ಯಾಪಾರಸ್ಥರು ಕೂಡ ಪೇ–ಟಿಎಂ. ಗೂಗಲ್ ಪೇ ಅವಲಂಬಿಸಿರುವುದನ್ನು ಕಾಣುತ್ತಲಿದ್ದೇವೆ. ಇದರಿಂದ ರಾಷ್ಟ್ರದ ಆರ್ಥಿಕತೆ ಬಲಗೊಳ್ಳುತ್ತಲಿವೆ. ಆರ್ಥಿಕ ಸೇರ್ಪಡೆಗೆ ಕಾರಣವಾಗಿರುತ್ತದೆ. ನಮ್ಮ ಸಹಕಾರ ಸಂಘಗಳು, ಸಹಕಾರ ಬ್ಯಾಂಕ್‌ಗಳು ಆಧುನಿಕ ಈ ಎಲ್ಲ ಸೌಲಭ್ಯ ಒಳಗೊಳ್ಳುವ ಮೃದು ತಂತ್ರಜ್ಞಾನ (software) ಅಳವಡಿಸಿಕೊಳ್ಳಬೇಕು. ಕೋರ್ ಬ್ಯಾಂಕಿಂಗ್ (centralised online real time -CORE, banking) ವ್ಯವಸ್ಥೆ ಅಳವಡಿಸಿಕೊಳ್ಳಬೇಕು. ತಮ್ಮದು ಸಣ್ಣ ವ್ಯವಹಾರವಾದಲ್ಲಿ ಇತರೆ ಬ್ಯಾಂಕ್‌ನ ಸಹಯೋಗದಿಂದ 'ಸ್ವಿಚ್'ನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಆರ್.ಟಿ.ಜಿ.ಎಸ್. (real time gross settlement) ನೆಫ್ಟ್ (national eloctranic fund transfer) ಸಾಧ್ಯವಾಗುತ್ತದೆ. ತಮ್ಮ ಲೆಕ್ಕ ನಿರ್ವಹಣೆ ಸುಲಭ ಸಾಧ್ಯವಾಗುತ್ತದೆ. ಆರ್ಥಿಕ ಸ್ಥಿತಿ, ನಗದು ಒಳ ಮತ್ತು ಹೊರ ಹರಿವು, ನಿಧಿಗಳ ನಿರ್ವಹಣೆ, ಒಟ್ಟಾರೆ ಆಸ್ತಿ ಜವಾಬ್ದಾರಿ ನಿರ್ವಹಣೆ ಸುಲಭ ಸಾಧ್ಯವಾಗುವುದಲ್ಲದೇ ಲಾಭದಾಯಕ ನಿರ್ವಹಣೆ ಸಾಧ್ಯವಾಗುತ್ತದೆ. ಸಾಲ ವಸೂಲಾತಿಗೆ ಹೆಚ್ಚು ಗಮನ, ಎನ್.ಪಿ.ಎ. ನಿರ್ವಹಣೆ, ಸೋರಿಕೆಗಳ ತಡೆಗಟ್ಟುವಿಕೆ ಸುಲಭ ಸಾಧ್ಯವಾಗುತ್ತದೆ. ಠೇವಣಿದಾರರೊಂದಿಗೆ, ಸಾಲಗಾರರೊಂದಿಗೆ ಸುಸಂಪರ್ಕ ಹೊಂದಲು, ಅವರಿಗೆ ಸಕಾಲದಲ್ಲಿ ನೆನಪಿಸಲು (ಸಂದೇಶಗಳನ್ನು ರವಾನಿಸುವ ಮೂಲಕ) ಸಾಧ್ಯವಾಗಿಸಿದೆ. ತನ್ನ ಪ್ರಚಾರಕ್ಕೆ, ನೂತನ ಠೇವಣಿ ಉತ್ಪನ್ನ ಮತ್ತು ಸಾಲದ ಉತ್ಪನ್ನ (products) ಸದಸ್ಯರಿಗೆ ಗ್ರಾಹಕರಿಗೆ ತಿಳಿಸಲು, ನೆನಪಿಸಲು

ಸಾಧ್ಯವಾಗುತ್ತದೆ. ಜಾಹಿರಾತಿಗೆ ಅತ್ಯಂತ ಅನುಕೂಲ ಕಲ್ಪಿಸುತ್ತದೆ. ಕೃತಕ ಬುದ್ಧಿಮತ್ತೆ (AI)ನ್ನು ಕೂಡ ಉಪಯೋಗಿಸಿಕೊಳ್ಳಬೇಕಿದೆ. ಈ ಎಲ್ಲ ಅನುಕೂಲತೆ ಒದಗಿಸಲು ಸಾಧ್ಯವಾಗಿರುವುದು 'ಇಂಟರ್ನೆಟ್' (ಅಂರ್ಜಾಲ) ವ್ಯವಸ್ಥೆಯಿಂದ, ಈ ಒಂದು ಸಂಪರ್ಕ ಸಾಧನ ಸಾಮಾಜಿಕ ಜಾಲ ತಾಣಗಳ ಮೂಲಕ ಕೂಡ ಸಂಪರ್ಕ ಮಾಹಿತಿ ಒದಗಿಸುವ ಪ್ರಚಾರ ಸಾಧನವಾಗಿ ಬಳಸಬೇಕಾಗಿದೆ. ಹಾಗಿದ್ದಲ್ಲಿ ಮಾತ್ರ ಯುವ ಜನತೆಯನ್ನು ಮುಟ್ಟಲು ಸಾಧ್ಯವಾಗುತ್ತದೆ. ಪೀಳಿಗೆಯಿಂದ ಪೀಳಿಗೆಗೆ ಸಹಕಾರ ಸಂಘಗಳ ಸೇವೆ ಸೌಲಭ್ಯಗಳನ್ನು ಕೊಂಡಯ್ಯಬಹುದು. ಒಟ್ಟಾರೆ ಆರ್ಥಿಕತೆಯಲ್ಲಿ ತನ್ನ ಭಾಗವನ್ನು ಸಹಕಾರ ಚಳವಳಿ ಹಿಗ್ಗಿಸಿಕೊಳ್ಳಲು ಸಾಧ್ಯವಾಗುತ್ತದೆ.

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು:** ಗ್ರಾಮೀಣ ಜನತೆಗೆ ಎಟುಕುವ, ಕೃಷಿ ಅಗತ್ಯತೆಗೆ ಅಗತ್ಯ ದುಡಿಯುವ ಬಂಡವಾಳ ಒದಗಿಸುವ, ಅದರಲ್ಲಿಯೂ ಸಣ್ಣ ಮತ್ತು ಅತಿ ಸಣ್ಣ ರೈತರ ಅಗತ್ಯತೆ ಪೂರೈಸುವ ಈ ಸಹಕಾರ ಸಂಘಗಳು ಕೂಡ ಮಾಹಿತಿ ತಂತ್ರಜ್ಞಾನ ಉಪಯೋಗಿಸುವಲ್ಲಿ ಹಿಂದೆ ಬೀಳುವಂತಿಲ್ಲ. ಈಗಾಗಲೇ ಕಡ್ಡಾಯವಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿ.ಡಿ.ಎಸ್.) ಪಡಿತರ ವಿತರಣೆಗೆ, ಬೆಳೆಸಾಲ ವಿತರಣೆಯಲ್ಲಿ 'ಫ್ರೂಟ್ಸ್' ತಂತ್ರಾಂಶ ಬಳಕೆ ಮಾಡಬೇಕಾಗಿದೆ. ಲೆಕ್ಕಗಳನ್ನು 'ಸಾಮಾನ್ಯ ಲೆಕ್ಕ ಪದ್ಧತಿ' ಅನುಸರಿಸಬೇಕಾಗಿದೆ. ಇದಕ್ಕೆ ನಬಾರ್ಡ್ ತಂತ್ರಾಂಶ ರಚಿಸಿ ನೀಡಿದೆ. ಸಂಘಗಳಲ್ಲಿ ಜಿ.ಕೇ.ಸ. ಬ್ಯಾಂಕಿನ ಶಾಖೆಯೊಡನೆ ಜೊಡಣೆಯಾಗಿ, 'ಮೈಕ್ರೊ ಎ.ಟಿ.ಎಂ.' ಗಳ ಸ್ಥಾಪನೆಯಾಗಿದೆ. ಎಲ್ಲ ಸಹಕಾರ ಸಂಘಗಳು ಈ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲೇ ಬೇಕಾಗಿದೆ. ಆಗ ಮಾತ್ರ ಅಲ್ಪಾವಧಿ ಕೃಷಿ ಪತ್ತಿನ ರಚನೆಯ ಬುನಾದಿಯಾದ ಈ ಸಂಘಗಳು ಉಳಿದು ಹೆಚ್ಚಿನ ಕೊಡುಗೆ ನೀಡಬಲ್ಲವು.

**ಉತ್ಪನ್ನ ಸಂಗ್ರಹಣೆ ಸಂಸ್ಕರಣೆ (ರೂಪಾಂತರ) ಮಾರಾಟ ಸಹಕಾರ ಸಂಘಗಳು:** ಧಾನ್ಯ, ಬೆಳೆಕಾಳು, ಎಣ್ಣೆ ಕಾಳು, ವಾಣಿಜ್ಯ ಬೆಳೆಗಳಾದ ಅಡಕೆ, ರಬ್ಬರ್ ಈ ಸಹಕಾರ ಸಂಘಗಳು ಕೂಡ ಮಾಹಿತಿ ತಂತ್ರಜ್ಞಾನ ಸೌಲಭ್ಯಗಳನ್ನು ಪಡೆಯಲು ಕಂಪ್ಯೂಟರೀಕರಣಗೊಳ್ಳಲೇಬೇಕು. ಮಾರುಕಟ್ಟೆ ಮಾಹಿತಿಗಳು ಅಂತರ್ಜಾಲದಿಂದ ಲಭ್ಯವಿದ್ದು ಉತ್ಪಾದಕರಿಗೆ ಉತ್ತಮ ನ್ಯಾಯಯುತ ದರ ದೊರೆಕಿಸಿಕೊಡಲು ಸಾಧ್ಯವಾಗುತ್ತದೆ. ಸಂಸ್ಕರಣೆ (ಮೌಲ್ಯವರ್ಧನೆ) ಮಾಡಿ ಮಾರಾಟ ಮಾಡುವಲ್ಲಿ ಇದು ಸಹಕಾರಿ. ಪ್ಯಾಕೇಜಿಂಗ್, ಸಂಗ್ರಹಣೆ, 'ಸಾಗಾಣಿ, ಚಿಲ್ಲರೆ ಮಾರಾಟ, ಚಿಲ್ಲರೆ ಮಾರಾಟ ಏಜೆನ್ಸಿಗಳೊಡನೆ ವ್ಯವಹಾರ ಎಲ್ಲಕ್ಕೂ ಮಾಹಿತಿ ತಂತ್ರಜ್ಞಾನದ ಅಳವಡಿಕೆ ಅತಿ ಅವಶ್ಯ. ಆನ್‌ಲೈನ್ ಮಾರಾಟಕ್ಕೂ ವಿವಿಧ 'ಪ್ಲಾಟ್ ಫಾರಂ' ಗಳನ್ನು (ಅಮೇಜಾನ್, ಫ್ಲಿಪ್ ಕಾರ್ಟ್, ಬಿಗ್ ಬಾಸ್ಕೆಟ್, ಇತರೆ) ಉಪಯೋಗಿಸಿಕೊಳ್ಳಲೇಬೇಕು. ಆಗ ಮಾತ್ರ ಖರೀದಿ ಶಕ್ತಿ ಉಳ್ಳ ಯುವ ಜನತೆಯನ್ನು ಮುಟ್ಟಬಹುದಾಗಿದೆ. ಆಗ ಮಾತ್ರ ಈ ಸಹಕಾರ ಕ್ಷೇತ್ರ ಉಳಿಯಬಹುದಾಗಿದೆ.

**ಹಾಲು ಉತ್ಪಾದನೆ ಸಹಕಾರ ವಲಯ:** 'ಅಮುಲ್' ಮತ್ತು 'ಅಮುಲ್ ಮಾದರಿ' 'ನಂದಿನಿ' ಯಶಸ್ಸಿನ ಹಿಂದಿನ ಗುಟ್ಟು, ಮಾರುಕಟ್ಟೆಯಲ್ಲಿ ಮೇಲೆ ತಿಳಿಸಿದ ಎಲ್ಲ ಮಾಹಿತಿ ತಂತ್ರಜ್ಞಾನದ ತಂತ್ರಗಾರಿಕೆಯ ಅಳವಡಿಕೆಯೇ ಆಗಿದೆ. ಬೆಂಗಳೂರಿನ 'ಹಾಪ್‌ಕಾಮ್ಸ್' ಆನ್‌ಲೈನ್ ಮಾರುಕಟ್ಟೆ ಆರಂಭಿಸಿರುವುದು ಶ್ಲಾಘನೀಯ. ಶಿರಸಿಯ 'ಕದಂಬ ಸೌಹಾರ್ದ' ಉತ್ಪನ್ನ ಮೆಣಸು, ಏಲಕ್ಕಿ, ಚಕ್ಕೆ, ಲವಂಗ, ಮುಂತಾದ ಸಾಂಬಾರು ಪದಾರ್ಥಗಳು ಆಕರ್ಷಣೀಯ ಪ್ಯಾಕೆಟ್‌ಗಳಲ್ಲಿ 'ಆನ್‌ಲೈನ್' ನಲ್ಲಿ ಲಭ್ಯವಿರುತ್ತದೆ. ಇದರಂತೆ ಇತರೆ ಸಹಕಾರ ಸಂಘಗಳು ಕೂಡ ತನ್ನ ಮಾರುಕಟ್ಟೆಯನ್ನು ವಿಸ್ತರಿಸಿಕೊಂಡಲ್ಲಿ ಸಹಕಾರದ ಪಾಲನ್ನು ವಿಸ್ತರಿಸಿ ತನ್ನ ಸದಸ್ಯರಿಗೆ ಸೇವೆ, ಸೌಲಭ್ಯ, ನ್ಯಾಯ ಒದಗಿಸಲು ಸಾಧ್ಯವಾಗುತ್ತದೆ.

**ಗ್ರಾಹಕ ಸಹಕಾರ ಸಂಘಗಳು:** ಗ್ರಾಹಕ ಸಹಕಾರ ವಲಯವೇ ಗ್ರಾಹಕರಿಗೆ ತಾವೇ ತಮಗೆ ಬೇಕಾದ ವಸ್ತುಗಳನ್ನು ತಾವೇ ಆರಿಸಿ ಕೊಂಡುಕೊಳ್ಳುವ ಸೌಲಭ್ಯ ರೂಪಿಸಿದೆ. ಆದರೆ, ಈಗ ಖಾಸಗಿ ಚಿಲ್ಲರೆ ಮಾರಾಟ ವಲಯದ ಸ್ಪರ್ಧೆ ಎದುರಿಸಲಾಗದೆ ಸಹಕಾರ ಗ್ರಾಹಕ ವಲಯ ಪೂರ್ಣ ಸ್ಥಗಿತ ಗೊಂಡಿರುವುದನ್ನು ಕಾಣುತ್ತಲಿದ್ದೇವೆ. ಆದರೆ ಯುರೋಪ್ ಖಂಡದಲ್ಲಿ ಈ ವಲಯ ಪ್ರಬುದ್ಧವಾಗಿ ಬೆಳೆದು ಈಗಲೂ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ನಮ್ಮ ರಾಷ್ಟ್ರದಲ್ಲಿ ಈರೀತಿ ಬೆಳವಣಿಗೆ ಯಾಗದಿರುವುದು ವಿಷಾದನೀಯ. ಯೂರೋಪ್ ಖಂಡದಲ್ಲಿ ಅತ್ಯಂತ ಆಧುನಿಕ ಮಾಹಿತಿ ತಂತ್ರಜ್ಞಾನದ ಅಳವಡಿಕೆ, ಬಂಡವಾಳದ ಕ್ರೋಡೀಕರಣವೇ ಯಶಸ್ಸಿಗೆ ಕಾರಣವಾಗಿರುತ್ತದೆ. ಮೀನುಗಾರಿಕೆ ಸಹಕಾರ ಸಂಘಗಳು, ಕರಾವಳಿ ಪ್ರದೇಶದಲ್ಲಿ ಸಮುದ್ರ ಮೀನುಗಾರಿಕೆ ಯಲ್ಲಿ ಮೀನು ಲಭ್ಯವಿರುವ ಪ್ರದೇಶದ ಬಗ್ಗೆ ದೂರ ಸಂವೇದಿ ಉಪಕರಣಗಳಿಂದ ಮಾಹಿತಿ ದೊರೆಯುತ್ತಿದ್ದು ಸಮುದ್ರದಲ್ಲಿ ಮೀನುಗಾರಿಕೆ ಮಾಡುತ್ತಿರುವವರಿಗೆ ಪ್ರದೇಶದ (ಅಕ್ಷಾಂಶ, ರೇಖಾಂಶ) ಮಾಹಿತಿಯನ್ನು ರವಾಗಿಸಲಾಗುತ್ತಿದೆ. ಇದರಿಂದ ಮೀನಿನ ಲಭ್ಯತೆಗೆ ಕಾರಣವಾಗುತ್ತಿದೆ. ಅಲ್ಲದೇ ಸಹಕಾರ ಸಂಘಗಳ ಕಾರ್ಯನಿರ್ವಹಣೆಯಲ್ಲಿ, ಕಂಪ್ಯೂಟರಿಕರಣ ಸಹಾಯಕ್ಕೆ ಬಂದಿರುತ್ತದೆ. ಮತ್ತು ಹೆಚ್ಚಿನ ವಿಸ್ತರಣೆ ಸಹಕಾರದ ಪಾಲನ್ನು ಹೆಚ್ಚಿಸಲು ಸಹಾಯವಾಗುತ್ತದೆ.

"ಬದಲಾವಣೆ ಜಗದ ನಿಯಮ". ಯಾವುದು ಸ್ಥಿರವೆಂದರೆ "ಬದಲಾವಣೆ" ಯೇ ಸ್ಥಿರ ಎಂಬ ಮಾತಿದೆ. ಬದಲಾವಣೆಗೆ ಹೊಂದಿಕೆಯಾಗದಿದ್ದಲ್ಲಿ ಅಸ್ತಿತ್ವವೇ ಇಲ್ಲವಾಗುತ್ತದೆ. 'ಅಪ್ ಡೇಟ್' ಆಗದಿದ್ದಲ್ಲಿ 'ಔಟ್ ಡೇಟ್' ಆಗುತ್ತೇವೆ ಎಂಬ ಮಾತು ದಿಟವಾಗುತ್ತದೆ. ಆದುದರಿಂದ ಸಹಕಾರ ಚಳವಳಿಯ ಭವಿಷ್ಯ ದೃಷ್ಟಿಯಿಂದ 'ಮಾಹಿತಿ ತಂತ್ರಜ್ಞಾನ'ದ ಬಹುಮುಖ ಬಳಕೆಯನ್ನು ಸಹಕಾರ ಸಂಘಗಳು ಮಾಡಲೇಬೇಕಾಗಿದೆ. ಅದರ ಸದ್ಬಳಕೆ ಅಗತ್ಯವಾಗಿದೆ.